Volume: 03 Issue-251 ಸೋಮವಾರ 17 ಆಗಸ್ಟ್ 2026 Price: 2.00 Rs. Pages - 4

ಸಂಪಾದಕರು, ಮಾಲೀಕರು: ರಾಧಿಕಾ ಎ.ಆರ್.

RNI:KARKAN/2023/88508, Postal Reg No:L2/RNP-1287/TMR/2025-27

# ಕರ್ನಾಟಕ ಸಕ್ಸಸ್ ನಂ 1

KARNATAKA SUCCESS NO1 Kannada Daily

ಕನ್ನಡ ದಿನಪತ್ರಿಕೆ

ಇದು ಸ್ವಾಭಿಮಾನಿಗಳ ಧ್ವನಿ

Email: radhikaarno1@gmail.com Ph: 9380988530

## ರಾಜ್ಯಾದ್ಯಂತ ಬಿರುಗಾಳಿ ಸಹಿತ ಭಾರೀ ಮಳೆ ಮುನ್ಸೂಚನೆ

ಬೆಂಗಳೂರು: ಕರ್ನಾಟಕದಾದ್ಯಂತ ಮುಂದಿನ ಕೆಲವು ದಿನಗಳ ಕಾಲ ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹವಾಮಾನ ವೈಪರೀತ್ಯ ಉಂಟಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ರೈತರು ಅಗತ್ಯ ಮುನ್ನೆಚ್ಚರಿಕೆ ವಹಿಸಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯುವಂತೆ ಅಧಿಕಾರಿಗಳು ಸೂಚಿಸಿದ್ದಾರೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದ ಬಹುತೇಕ ಭಾಗಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಸಮುದ್ರದಲ್ಲಿ ಗಾಳಿಯ ವೇಗ ತೀವ್ರವಾಗಿರುವುದರಿಂದ ಮೀನುಗಾರರು ಕಡಲಿಗೆ ಇಳಿಯದಂತೆ ಮತ್ತು ಜಾಗರೂಕರಾಗಿರುವಂತೆ ಎಚ್ಚರಿಸಲಾಗಿದೆ.

### ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನೆರವೇರಿಸಿದ ಡಿಸಿಎಂ ಡಾ. ಜಿ. ಪರಮೇಶ್ವರ್

## 2027ರ ಅಂತ್ಯಕ್ಕೆ ಜಿಲ್ಲೆಯ ಎರಡೂ ರೈಲ್ವೆ ಕಾಮಗಾರಿಗಳ ಲೋಕಾರ್ಪಣೆ

ತುಮಕೂರು: ತುಮಕೂರು– ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು 2027ರ ಡಿಸೆಂಬರ್‌ಅಂತ್ಯಕ್ಕೆ ಈ ಮಾರ್ಗದಲ್ಲಿ ರೈಲ್ವೆ ಸಂಚಾರ ಪ್ರಾರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದರು.



ಅವರು ತುಮಕೂರಿನ ಎಂ.ಜಿ. ಸ್ಟೇಡಿಯಂನಲ್ಲಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು. ತುಮಕೂರು–ರಾಯದುರ್ಗ ರೈಲ್ವೆ ಯೋಜನೆಯು ತುಮಕೂರು ಜಿಲ್ಲೆಯ 4 ತಾಲೂಕುಗಳ ಒಟ್ಟು 77 ಗ್ರಾಮಗಳ ಮೂಲಕ 104.02 ಕಿ.ಮೀ ವ್ಯಾಪ್ತಿಯಲ್ಲಿ ಹಾದು ಹೋಗು ತಿದ್ದು, ಒಟ್ಟು ಅವಶ್ಯಕವಾದ 1369 ಎಕರೆ ಭೂಮಿ ಯನ್ನು ಸ್ವಾಧೀನಪಡಿಸಿಕೊಂಡು ಈಗಾಗಲೇ ಶೇಕಡ 99.9ರಷ್ಟು ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿ ಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಹಾಗೆಯೇ ತುಮಕೂರು– ದಾವಣಗೆರೆ ರೈಲ್ವೆ ಯೋಜನೆಯು ತುಮಕೂರು ಜಿಲ್ಲೆಯ 2 ತಾಲೂಕುಗಳ ಒಟ್ಟು 35 ಗ್ರಾಮಗಳ ಮೂಲಕ 58.69ಕಿ.ಮೀವ್ಯಾಪ್ತಿಯಲ್ಲಿ ಹಾದು ಹೋಗುತ್ತಿದ್ದು, ಒಟ್ಟು ಅವಶ್ಯಕವಾದ 845 ಎಕರೆ ಜಮೀನಿನ ಪೈಕಿ ಈವರೆಗೂ 816 ಎಕರೆ ಅಂದರೆ ಶೇಕಡ 97ರಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದರು.

ಕುಡಿಯುವ ನೀರಿಗಾಗಿ ಕೈಗೆತ್ತಿಕೊಂಡಿರುವ ಬಹು ನಿರೀಕ್ಷಿತ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯು ಜಿಲ್ಲೆಯ 8 ತಾಲೂಕುಗಳಲ್ಲಿ ಒಟ್ಟು 197 ಗ್ರಾಮಗಳ ಮೂಲಕ 163 ಕಿ.ಮೀ. ವ್ಯಾಪ್ತಿಯಲ್ಲಿ ಹಾದು ಹೋಗುತ್ತಿದ್ದು, ಅವಶ್ಯಕವಾದ 3,118 ಎಕರೆ ಜಮೀನಿನ ಪೈಕಿ ಶೇ.97ರಷ್ಟು ಭೂ ಸ್ವಾಧೀನಪಡಿಸಿಕೊಂಡು ಕೋರಿಕೆ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಹೇಮಾವತಿ ನಾಲಾ ಯೋಜನೆಯು ಜಿಲ್ಲೆಯ ಕೆರೆಗಳಿಗೆ ಅಂತರ್ಜಲ ಉತ್ತೇಜನಕ್ಕಾಗಿ ಹೇಮಾವತಿ ನದಿಯಿಂದ ನೀರನ್ನು ಪಂಪ್ ಮಾಡಿ ಗುರುತ್ವಾಕರ್ಷಣ ಕಾಲುವೆಗಳ ಮೂಲಕ 5 ತಾಲೂಕುಗಳ ಒಟ್ಟು 94 ಗ್ರಾಮಗಳಿಗೆ ನೀರೊದಗಿಸಲು ಲಿಂಕ್ ಕೆನಾಲ್ ಯೋಜನೆ ಸೇರಿ ಒಟ್ಟು 515 ಎಕರೆ ಜಮೀನಿನ ಪೈಕಿ ಶೇಕಡ 75ರಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಭೂ ಕೋರಿಕೆ ಸಂಸ್ಥೆಗೆ ಹಸ್ತಾಂತರಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಜೂನ್ ಮಾಹೆಯಿಂದ ಈವರೆಗೂ ವಾಡಿಕೆ ಮಳೆಗಿಂತ ಕಡಿಮೆ ಮಳೆಯಾಗಿದೆ. ಜೂನ್ ಮಾಹೆಯಲ್ಲಿ ಶೇ.20 ರಷ್ಟು ಹಾಗೂ ಜುಲೈ ಮಾಹೆಯಲ್ಲಿ ಶೇ. 75ರಷ್ಟು ಮಳೆ ಕೊರತೆಯಾಗಿದೆ. ಸಮರ್ಪಕವಾಗಿ ಮಳೆಯಾಗದ ಕಾರಣ ಬೆಳೆಗಳು ರೈತರ ಕೈತಪ್ಪಿ ಹೋಗಿದ್ದು, ಜಿಲ್ಲೆಯಲ್ಲಿ ಬರದ ಛಾಯೆ ಎದುರಾಗಿದೆ ಎಂದರು.

ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಬರಪರಿಸ್ಥಿತಿಯನ್ನು ಅವಲೋಕಿಸಲಾಗಿದ್ದು, ಬರ ನಿರ್ವಹಣೆಯ ನೆರವು ಕೋರಿ ಈಗಾಗಲೇ ಕೇಂದ್ರಕ್ಕೆ ಮನವಿ ಮಾಡಲಾಗಿದೆ ಎಂದರು.

ತುಮಕೂರು ಮಹಾನಗರಪಾಲಿಕೆ ಒಳಗೊಂಡಂತೆ ಜಿಲ್ಲೆಯ ಒಟ್ಟು 11 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಸತಿ ನಿವೇಶನ ರಹಿತರಿಗೆ ಶಾಶ್ವತ ಸೂರು ಕಲ್ಪಿಸಿಕೊಡಲು ವಿವಿಧ ಸರ್ವೇ ನಂಬರ್ ಗಳಲ್ಲಿ ಒಟ್ಟಾರೆ 192 ಎಕರೆ ಪ್ರದೇಶವನ್ನು ಈಗಾಗಲೇ ಗುರುತಿಸಲಾಗಿದ್ದು, ನಗರ ಆಶ್ರಯ ಸಮಿತಿಯ ಮೂಲಕ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಶಾಸಕರಾದ ಜ್ಯೋತಿ ಗಣೇಶ್, ಸುರೇಶಗೌಡ, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಎಸ್ಪಿ ಅಶೋಕ್ ಕುಮಾರ್, ಜನಪ್ರತಿನಿಧಿಗಳು, ಅಧಿಕಾರಿಗಳು ಇದ್ದರು.

## ತುಮಕೂರಿನಲ್ಲಿ ಮೆಡಿಕಲ್ ಕಾಲೇಜು ನಿರ್ಮಿಸಲು ಸಿಎಂ ಬಳಿ ಬೇಡಿಕೆ



ತುಮಕೂರು ತುಮಕೂರಿನಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ನಿರ್ಮಿಸಲು ಮುಖ್ಯ ಮಂತ್ರಿಗಳ ಬಳಿ ಬೇಡಿಕೆ ಇಟ್ಟಿರುವುದಾಗಿ ಉಪಮು ಖ್ಯಮಂತ್ರಿ ಪರಮೇಶ್ವರ್‌ತಿಳಿಸಿದರು.

ಅವರು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೂಳೂರಿನ ಸರ್ಕಾರಿ ಜಾಗದಲ್ಲಿ ಮೆಡಿಕಲ್ ಕಾಲೇಜು ಮಾಡಬಹುದು. ಬೆಂಗಳೂರು– ತುಮ ಕೂರು ಮೆಟ್ರೋ ಅನುಮತಿಗಾಗಿ ಕೇಂದ್ರ ಕ್ಕೆ ಪತ್ರ ಬರೆದಿರುವುದಾಗಿ ತಿಳಿಸಿದರು.

ತುಮಕೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವಂತೆ ಪುನರುಚ್ಚರಿಸಿದ ಅವರು, ಬಿಡದಿಗಿಂತ ತುಮಕೂ ರಿನಲ್ಲಿ ವಿಮಾನ ನಿಲ್ದಾಣ ಉತ್ತಮ. ಅಲ್ಲದೆ ಇದಕ್ಕೆ ಎಚ್ ಡಿ ಕುಮಾರಸ್ವಾಮಿಯವರ ಬೆಂಬಲ ಕೂಡ ಇದೆ ಎಂದರು.

ಜಾರ್ಖಂಡ್ ನಲ್ಲಿ ಮಲ್ಲಿಕಾರ್ಜುನ್ ಖರ್ಗೆ ಭಾಷಣ ಮಾಡಿದ್ದ ಜಾಗ ಶುದ್ಧೀಕರಣ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಈ ಘಟನೆಯನ್ನು ಖಂಡಿಸುವುದಾಗಿ ತಿಳಿಸಿದರು. ನಾವು 21ನೇ ಶತಮಾನದಲ್ಲಿ ಇದ್ದೇವೆ. ಆದರೂ ಈ ರೀತಿ ಮಾಡುವುದು ಸರಿಯಲ್ಲ. ಇನ್ನೂ ಮನುವಾದದಲ್ಲೇ ಇದ್ದೇವೆ ಅಂದರೆ ದುರಾದೃಷ್ಟಕರ ಎಂದರು. ಎತ್ತಿನಹೊಳೆ ನೀರನ್ನು ತುಮಕೂರಿಗೆ ಕೊಡಲು ಯೋಜನೆ ರೂಪಿಸಲಾಗುತ್ತಿದೆ ಎಂದ ಅವರು, ಕುಡಿಯುವ ನೀರಿಗೆ ಬಜೆಟ್ ನಲ್ಲಿ ಆದ್ಯತೆ ಕೊಡಿ ಎಂದು ಸಿಎಂ ಗೆ ಮನವಿ ಮಾಡಿಕೊಂಡಿದ್ದೇನೆ ಎಂದು ತಿಳಿಸಿದರು.

ಪೊಲೀಸರು, ವೈದ್ಯರು ಹಾಗೂ ಶಿಕ್ಷಕರ ಹುದ್ದೆ ತುರ್ತಾಗಿ ತುಂಬುತ್ತೇವೆ. ಜೆನ್ ಜೀ, ಆಲ್ಫಾ ಗಳು ಭಾರತದ ಭವಿಷ್ಯಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ. ಜಾತಿ, ಧರ್ಮ, ಬಣ್ಣ, ಭಾಷೆ ಮೀರಿ ಆಚೆಗೆ ಯೋಚಿಸುತ್ತಿದ್ದಾರೆ ಎಂದರು.

## ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ



ತುಮಕೂರು: ಮಾಜಿ ಶಾಸಕ ಡಿ.ಸಿ ಗೌರಿಶಂಕರ್ ಸಮ್ಮುಖದಲ್ಲಿ ಹೊನ್ನುಡಿಕೆ ಗ್ರಾಮದ ಬಿಜೆಪಿ ಪಕ್ಷದ ಅನೇಕ ಯುವಕರುಗಳಾದ, ವಿನಯ್ ಹೆಚ್.ಆರ್, ಚೇತನ್ ಕುಮಾರ್, ಕಿರಣ್, ನರಸಿಂಹಯ್ಯ, ಪ್ರಮೋದ್, ಶಿವು,ಪುನೀತ್, ಮನೋಜ್ ಗೌಡ, ಮಂಜುನಾಥ್, ಪವನ್ ಹಾಗೂ.

ಬೆಳಗುಂಬ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡ್ಡರಹಳ್ಳಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರತ್ನಮ್ಮ ಅವರ ಜೊತೆ, ಕರೆರಂಗಣ್ಣ ಅವರ ಸಮ್ಮುಖದಲ್ಲಿ, ಅನೇಕ ಜನ ಹಿರಿಯರು, ಮತ್ತು ಮಹಿಳೆಯರು. ಬಿ.ಜೆ.ಪಿ ಪಕ್ಷವನ್ನು ತೊರೆದು ಕಾಂಗ್ರೆಸ್' ಪಕ್ಷವನ್ನು ಸೇರ್ಪಡೆಯಾದರು.

## ಶ್ರೀ ಕ್ಷೇತ್ರ ಶನಿಮಹಾತ್ಮ ದೇವಸ್ಥಾನಕ್ಕೆ ಮಾಜಿ ಸಚಿವ ವಿನಯ್ ಕುಲಕರ್ಣಿ ಭೇಟಿ: ವಿಶೇಷ ಪೂಜೆ ಹಾಗೂ ದರ್ಶನ

ಪಾವಗಡ: ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ವಿನಯ್ ಕುಲಕರ್ಣಿ ಮತ್ತು ಅವರ ಕುಟುಂಬದವರು ಶ್ರಾವಣ ಮಾಸದ ಅಂಗವಾಗಿ ಪ್ರಸಿದ್ಧ ಶ್ರೀ ಕ್ಷೇತ್ರ ಶನಿಮಹಾತ್ಮ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ ದೇವರ ಆಶೀರ್ವಾದ ಪಡೆದರು



ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಶಾಸಕರಾದ ಹೆಚ್.ವಿ. ವೆಂಕಟೇಶ್ ರವರು ವಿನಯ್ ಕುಲಕರ್ಣಿಯವರನ್ನು ಆತ್ಮೀಯವಾಗಿ ಸ್ವಾಗತಿಸಿ ಜೊತೆಯಲ್ಲಿ ನಿಂತು ಶನಿ ಮಹಾತ್ಮ ದೇವರ ದರ್ಶನ ಮಾಡಿಸಿದರು.

ಈ ವೇಳೆ ಎಸ್.ಎಸ್. ಕೆ.ಸಂಘದ ಅಧ್ಯಕ್ಷರಾದ ಜಿ. ಎಸ್.ಅನಿಲ್ ಕುಮಾರ್,ಪುರಸಭಾ ಮಾಜಿ ಅಧ್ಯಕ್ಷರಾದ ಸುದೇಶ್ ಬಾಬು, ಶಂಕರರೆಡ್ಡಿ, ಎಸ್.ಎಸ್.ಕೆ. ಸಂಘದ ಮಾಜಿ ಪುರಸಭಾ ಖಣಟ್ಖುಟಜ ಕಲ್ಪವೃಕ್ಷ ರವಿ, ಅಲ್ಪಸಂಖ್ಯಾತ ಮುಖಂಡರಾದ ಷಾ ಬಾಬು ಸೇರಿದಂತೆ ಹಲವು ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ಮೊದಲನೇ ಶ್ರಾವಣ ಶನಿವಾರದ ಪ್ರಯುಕ್ತ ರಾಜ್ಯದ ಮತ್ತು ಪಕ್ಕದ ಆಂಧ್ರ ತೆಲಂಗಾಣ ರಾಜ್ಯಗಳಿಂದ ಭಕ್ತರ ಸಾಗರ ಬಂದಿತ್ತು, ಬೆಳಗಿನಿಂದಲೇ ಭಕ್ತರು ತೈಲಾಭಿಷೇಕ, ಮತ್ತಿತರ ಪೂಜಾ ಸೇವೆಗಳನ್ನ ಕೈಗೊಂಡು ನಂತರ ತೀರ್ಥ ಪ್ರಸಾದವನ್ನು ಸ್ವೀಕರಿಸಿದ್ದಾರೆ,

ಶನಿ ದೇವರ ದರ್ಶನ ಪಡೆದ ನಂತರ ಬೆಟ್ಟದ ದಾರಿಗೆ ಹಾದು ಹೋಗುವ ಪ್ರಖ್ಯಾತ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಭಕ್ತರು ತೆರಳಿ ಆಂಜನೇಯನ ದರ್ಶನ ಪಡೆದುಕೊಂಡು ಪುನೀತರಾಗಿದ್ದಾರೆ,

ದೇವಸ್ಥಾನದ ವತಿಯಿಂದ ಅನ್ನಪೂರ್ಣೇಶ್ವರಿ ದಾಸೋಹದಲ್ಲಿ ಸಾಸ್ತಾರು ಭಕ್ತರಿಗೆ ಉಚಿತ ಅನ್ನ ಪ್ರಸಾದವನ್ನು ವಿತರಿಸಲಾಯಿತು. ಭಕ್ತರು ಸರ್ತಿ ಸಾಲಿನಲ್ಲಿ ದರ್ಶನ ಪಡೆದುಕೊಳ್ಳಲು ಬ್ಯಾರಿ ಕೇಡ್ ನ್ನು ಹಾಕಲಾಗಿತ್ತು ಲಾಯಿತು.

ಪಾವಗಡ ಪೊಲೀಸ್ ಠಾಣಾ ಸಿಪಿಐ ಸುರೇಶ್ ನೇತೃತ್ವದಲ್ಲಿ ಭಾರಿ ಬಂದೊ ಬಸ್ತನ್ನು ಏರ್ಪಡಿಸಲಾಗಿತ್ತು.

## ಜೆಡಿಎಸ್ ಕಚೇರಿಯಲ್ಲಿ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ

ತುಮಕೂರು: ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಸಂಭ್ರಮದಿಂದ 80ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಇದರ ಅಂಗವಾಗಿ ಜೆಡಿಎಸ್ ಮಹಿಳಾ ಘಟಕ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆ, ಹಲವು ಮನರಂಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.



ಕಚೇರಿ ಆವರಣದಲ್ಲಿ ರಂಗೋಲಿ ಸ್ಪರ್ಧೆ, ಲೆಮನ್ ಅಂಡ್ ಸ್ಪೂನ್, ಮಡಕೆ ಒಡೆಯುವುದು, ಸೂಪರ್ ಮಿನಿಟ್ ಲೋಟ ಜೋಡಿಸುವುದು, ಮ್ಯೂಸಿಕಲ್ ಚೇರ್ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಮಹಿಳೆಯರು ಬಣ್ಣಬಣ್ಣದ ರಂಗೋಲಿ ಹಾಕಿ ಸ್ವಾತಂತ್ರ್ಯೋತ್ಸವದಲ್ಲಿ ಸಡಗರದಿಂದ ಪಾಲ್ಗೊಂಡಿದ್ದರು. ಸ್ಪರ್ಧೆಗಳ ವಿಜೇತರಿಗೆ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಹೆಚ್. ನಿಂಗಪ್ಪ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ವಿತರಿಸಿದರು.

ಇದಕ್ಕೂ ಮೊದಲು ಜಿಲ್ಲಾಧ್ಯಕ್ಷ ಹೆಚ್. ನಿಂಗಪ್ಪ ಧ್ವಜಾರೋಹಣ ನೆರವೇರಿಸಿ ಧ್ವಜವಂದನೆ ಸ್ವೀಕರಿಸಿದರು. ಸ್ವಾತಂತ್ರ್ಯ ದಿನಾಚರಣೆ ಎಲ್ಲಾ ಭಾರತೀಯರು ಹೆಮ್ಮೆ, ಅಭಿಮಾನದಿಂದ ಆಚರಿಸುವ ಹಬ್ಬ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಅನೇಕ ಮಹನೀಯರು ತ್ಯಾಗ, ಹೋರಾಟ ಮಾಡಿದ್ದಾರೆ. ಸೆರೆವಾಸ ಅನುಭವಿಸಿದ್ದಾರೆ. ಹೋರಾಟದಲ್ಲಿ ಜೀವ ತೆತ್ತಿದ್ದಾರೆ. ಅಂತಹ ಮಹನೀಯರ ಸ್ಮರಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೆಚ್. ನಿಂಗಪ್ಪ ಹೇಳಿದರು.

ಜಿಲ್ಲಾ ಜೆಡಿಎಸ್ ಕಾರ್ಯಾಧ್ಯಕ್ಷ ಟಿ.ಆರ್. ನಾಗರಾಜು, ನಗರ ಅಧ್ಯಕ್ಷ ಟಿ.ಹೆಚ್. ಜಯರಾಮ್, ರಾಜ್ಯ ಎಸ್ಸಿ ಘಟಕ ಉಪಾಧ್ಯಕ್ಷ ಸೋಲಾರ್ ಕೃಷ್ಣಮೂರ್ತಿ, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ರೇಖಾ ರಾಜ್ ಗೌಡ, ನಗರ ಅಧ್ಯಕ್ಷೆ ಲಕ್ಷ್ಮೀ ನಾಯಕ್, ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷೆ ಚಂಪಕಮಾಲಾ, ನಗರ ಮಹಾಪ್ರಧಾನ ಕಾರ್ಯದರ್ಶಿ ಟಿ.ಸಿ. ಪ್ರಭಾಕರ್, ನಗರಪಾಲಿಕೆ ಮಾಜಿ ಸದಸ್ಯರಾದ ಲಕ್ಷ್ಮಿನರಸಿಂಹರಾಜು, ಟಿ.ಹೆಚ್. ಬಾಲಕೃಷ್ಣ, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಅಶ್ವತ್ಥಕುಮಾರ್, ಮುಖಂಡರಾದ ವಿಜಯ್‌ಗೌಡ, ಕೆಂಪರಾಜು, ತಾಹೇರಾ ಕುಲ್ಸಂ, ಲಕ್ಷ್ಮಮ್ಮ, ಯಶೋಧ, ಸುವರ್ಣ, ಆಶಾ ಜಾನ್, ವಿನೋದ್, ಜಯಲಕ್ಷ್ಮಿ ಮೊದಲಾದವರು ಭಾಗವಹಿಸಿದ್ದರು.

## ಚನ್ನಬಸವ ರಾಜೇಂದ್ರ ಸ್ವಾಮಿಗಳ ಮಾಸಿಕ ಪುಣ್ಯಸ್ಮರಣೆ

ತುಮಕೂರು: ನಗರದ ಹೊರಪೇಟೆ ಕರಿಬಸವೇಶ್ವರಸ್ವಾಮಿ ಮಠದ ಜಗದ್ಗುರು ಲಿಂಗೈಕ್ಯ ಚನ್ನವಸವ ರಾಜೇಂದ್ರ ಮಹಾಸ್ವಾಮಿಗಳವರ ಮಾಸಿಕ ಪುಣ್ಯ ಸಂಸ್ಮರಣೋತ್ಸವ ಭಾನುವಾರ ನೆರವೇರಿತು. ವಿವಿಧ ಮಠಗಳ ಸ್ವಾಮೀಜಿಗಳು, ಸಮಾಜದ ಗಣ್ಯರು ಭಾಗವಹಿಸಿ ಲಿಂಗೈಕ್ಯ ಜಗದ್ಗುರುಗಳಿಗೆ ಭಕ್ತಿ ಸಮರ್ಪಣೆ ಮಾಡಿದರು.



ಮಾಜಿ ಸಂಸದ ಜಿ.ಎಸ್. ಬಸವರಾಜು ಮಾತನಾಡಿ, ಲಿಂಗೈಕ್ಯ ಚನ್ನಬಸವ ರಾಜೇಂದ್ರ ಸ್ವಾಮೀಜಿಗಳು ಮಠದ ಪರಂಪರೆ, ಧಾರ್ಮಿಕ ಆಚರಣೆಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದರು. ಸಾಮಾಜಿಕ ಪರಿವರ್ತನೆಗಾಗಿ ಜನಜಾಗೃತಿ ಮೂಡಿಸುತ್ತಿದ್ದರು. ಕಷ್ಟವೆಂದು ಬಂದವರಿಗೆ ಸಾಂತ್ವನ ಹೇಳಿ ಸಹಾಯ ಮಾಡುತ್ತಿದ್ದರು ಎಂದರು.

ಸುಮಾರು 99 ವರ್ಷ ಕಾಲ ಬಾಳಿದ್ದ ಸ್ವಾಮೀಜಿಗಳು ಮಠದ ಆಸ್ತಿಯನ್ನು ರಕ್ಷಣೆ ಮಾಡಿ, ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ ತಾವೇ ಸಮಾಜದ ಆಸ್ತಿಯಾಗಿದ್ದರು. ಅವರ ಪರಂಪರೆಯನ್ನು ಅವರ ಉತ್ತರಾಧಿಕಾರಿಗಳು ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್, ಮಾಜಿ ಸಚಿವ ಸೊಗಡು ಶಿವಣ್ಣ, ನಗರ ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್ ಮತ್ತಿತರ ಗಣ್ಯರು ಭಾಗವಹಿಸಿ ಪೂಜ್ಯರಿಗೆ ಭಕ್ತಿ ನಮನ ಸಲ್ಲಿಸಿದರು.

ಕರಿಬಸವೇಶ್ವರಸ್ವಾಮಿ ಮಠದ ಉತ್ತರಾಧಿಕಾರಿ ಡಾ. ಕರಿಬಸವರಾಜೇಂದ್ರ ಮಹಾಸ್ವಾಮೀಜಿ ಸಮಾರಂಭದ ಅಧ್ಯಕ್ಷತೆ ವಹಿಸಿ, ಜಗದ್ಗುರು ಚನ್ನಬಸವ ರಾಜೇಂದ್ರ ಸ್ವಾಮೀಜಿಗಳು ಕೇವಲ ಧರ್ಮ ಜಾಗೃತಿ ಮಾಡದೆ ಸಮಾಜದ ಪಿಡುಗುಗಳ ನಿವಾರಣೆಗೆ ಪ್ರಯತ್ನ ಮಾಡಿದ್ದರು. ಮದ್ಯವ್ಯಸನಿಗಳ ಮನವೊಲಿಸಿ ಅವರು ಕುಡಿತದಿಂದ, ದುಶ್ಚಟಗಳಿಂದ ದೂರವಾಗಲು ಕಾರಣರಾಗಿದ್ದಾರೆ. ಇಂತಹ ಅನೇಕ ಸಮಾಜ ಸುಧಾರಣಾ ಕಾರ್ಯಗಳನ್ನು ಪೂಜ್ಯವರು ಮಾಡಿ ಎಲ್ಲಾ ಮಠಾಧೀಶರಿಗೂ ಮಾದರಿಯಾಗಿದ್ದಾರೆ ಎಂದು ಹೇಳಿದರು.

ಬೆಟ್ಟದಹಳ್ಳಿ ಗವಿಮಠದ ಚಂದ್ರಶೇಖರಸ್ವಾಮೀಜಿ, ಬೆಳ್ಳಾವಿ ಕಾರದೇಶ್ವರ ಮಠದ ಕಾರದ ವೀರಬಸವಸ್ವಾಮೀಜಿ, ಹೆಬ್ಬೂರು ರಾಮೇನಹಳ್ಳಿ ಮಠದ ಶಿವಪಂಚಾಕ್ಷರಿ ಸ್ವಾಮೀಜಿ, ಮಾಕನಹಳ್ಳಿ ಜಂಗಮ ಮಠದ ಗಂಗಾಧರ ಸ್ವಾಮೀಜಿ, ವನಕಲ್ಲು ಮಲ್ಲೇಶ್ವರ ಮಠದ ಬಸವರಮಾನಂದ ಸ್ವಾಮೀಜಿ, ವಿಜಯಪುರದ ಮಹದೇವ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ನವಗ್ರಹ ಲಕ್ಷ್ಮೀ ದೇವಸ್ಥಾನದ ನಾಗೇಂದ್ರ ಸ್ವಾಮೀಜಿ ಅವರು ಚನ್ನಬಸವ ರಾಜೇಂದ್ರ ಸ್ವಾಮೀಜಿಗೆ ನುಡಿ ನಮನ ಸಲ್ಲಿಸಿದರು. ನಗರ ವೀರಶೈವ ಸಮಾಜಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್, ಬಾಪೂಜಿ ವಿದ್ಯಾಸಂಸ್ಥೆ ಎನ್. ಬಸವಯ್ಯ, ವಿ3 ವೆಂಚರ್ಸ್ ಮಾಲೀಕ, ಯುವ ಮುಖಂಡ ಅರಕೆರೆ ರವೀಶ್, ಮುಖಂಡರಾದ ಟಿ.ಸಿ. ದಯಾನಂದ್, ಟಿ.ಸಿ. ಬಸವರಾಜು, ಮನು ಹರಳೂರು, ಪ್ರತಾಪ್ ಮಲ್ಲಣ್ಣ, ಅನುಸೂಯಮ್ಮ, ಟಿ.ಎಸ್. ಗಟ್ಟಿ, ಫೋಟೋ ರೇಣುಕಾಪ್ರಸಾದ್, ಅನಿಲ್‌ಕುಮಾರ್ ಮೊದಲಾದವರು ಭಾಗವಹಿಸಿದ್ದರು.

## 'ತಿಪಟೂರನ್ನು ಜಿಲ್ಲಾ ಕೇಂದ್ರ ಮಾಡಿ ಅಭಿವೃದ್ಧಿ ಪಡಿಸುತ್ತೇನೆ'

### ತಿಪಟೂರು ಕಲ್ಪತರು ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಶಾಸಕ ಷಡಕ್ಷರಿ

ತಿಪಟೂರು: ಕಲ್ಪತರು ನಾಡು ತಿಪಟೂರನ್ನು ಜಿಲ್ಲಾಕೇಂದ್ರ ಮಾಡಿ, ಇಲ್ಲವೇ ಸಚಿವ ಸ್ಥಾನ ನೀಡಿ ಎಂದು ಮುಖ್ಯ ಮಂತ್ರಿಗಳು ಹಾಗೂ ಪಕ್ಷದ ಮುಖಂಡರಲ್ಲಿ ಕೇಳಿದ್ದೇನೆ. ಜಿಲ್ಲಾಕೇಂದ್ರ ಮಾಡಲು ಸಚಿವ ಸ್ಥಾನ ತ್ಯಾಗ ಮಾಡಿದ್ದೇನೆ. ತಿಪಟೂರು ಜಿಲ್ಲೆ ಮಾಡಿ ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎನ್ನುವುದು ನನ್ನ ಧ್ಯೆಯವಾಗಿದೆ ಎಂದು ಶಾಸಕ ಕೆ. ಷಡಕರಿ ತಿಳಿಸಿದರು.



ನಗರದ ಕಲ್ಪತರು ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ನಡೆದ 80ನೇ ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಿಪಟೂರು ಜಿಲ್ಲೆಯಾಗಬೇಕು ಎನ್ನುವುದು ನನ್ನ ಕನಸು. ಈ ನಿಟ್ಟಿನಲ್ಲಿ ಹೋರಾಟ ಮಾಡುತ್ತೇನೆ. ಜಿಲ್ಲೆಗಾಗಿ ಸಚಿವ ಸ್ಥಾನ ತ್ಯಾಗ ಮಾಡಿದ್ದೇನೆ. ತಿಪಟೂರನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು, ನಗರ ಹಾಗೂ ಗ್ರಾಮೀಣ ಭಾಗಕ್ಕೆ ಅಗತ್ಯವಾದ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು ಎನ್ನುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರು.

ಧ್ವಜಾರೋಹಣ ನೆರವೇರಿಸಿ, ಧ್ವಜವಂದನೆ ಸ್ವೀಕರಿಸಿ ಮಾತನಾಡಿದ ಉಪವಿಭಾಗಾಧಿಕಾರಿ ಸಪ್ತಶ್ರೀ, ರಾಜಮಹಾರಾಜರ ಕಾಲದಲ್ಲಿ ಭವ್ಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಹೊಂದಿದ್ದ ಭಾರತ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ತನ್ನ ಶ್ರೀಮಂತಿಕೆಯನ್ನು ಕಳೆದುಕೊಂಡು ಗುಲಾಮಗಿರಿ ಅನುಭವಿಸಬೇಕಾಯಿತು. ಭಾರತ ಸ್ವತಂತ್ರವಾಗಬೇಕು ಎನ್ನುವ ಮಹದಾಸೆಯೊಂದಿಗೆ ಹೋರಾಟ ನಡೆಸಿದ ಸಾವಿರಾರು ಜನರ ಪ್ರಾಣಾರ್ಪಣೆ, ತ್ಯಾಗಹಾಗೂ ಬಲಿದಾನದಿಂದ ದೇಶಸ್ವತಂತ್ರಗೊಂಡಿತು ಎಂದರು.

ತಹಸೀಲ್ದಾರ್‌ಮೋಹನ್ ಕುಮಾರ್, ಡಿವೈಎಸ್‌ಪಿ ಎಂ.ಎಚ್. ಉಮೇಶ್, ಇಒಸುದರ್ಶನ್, ಪೌರಾಯುಕ್ತ ವಿಶ್ವೇಶ್ವರ ಬದರಗಡೆ, ಕ್ಷೇತ್ರ ಶಿಕ್ಷಣಾಧಿಕಾರಿತಾರಾಮಣಿ, ಪ್ರಾಂಶುಪಾಲ ಎಂ.ಡಿ. ಶಿವಕುಮಾರ್, ಬೆಸ್ಕಾಂ ಇಲಾಖೆಯ ಮನೋಹರ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎನ್. ಕಾಂತರಾಜು ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಯ್ಯಪ್ಪಸ್ವಾಮಿ ಟ್ರಸ್ಟ್ ವತಿಯಿಂದ ಅನ್ನದಾನ

ಪಾವಗಡ: ಶ್ರಾವಣಮಾಸ ಮೊದಲನೇ ದಿನದ ಜಾತ್ರಾ ಮಹೋತ್ಸವದ ಹಿನ್ನೆಲೆ ಶನಿವಾರ ಇಲ್ಲಿನ ಶ್ರೀ ಧರ್ಮಶಾಸ್ತ್ರ ಅಯ್ಯಪ್ಪ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಶನಿ ಮಹಾತ್ಮ ಸ್ವಾಮಿ ದೇವಸ್ಥಾನಕ್ಕೆ ಆಗಮಿಸಿರುವ ಸುಮಾರು 2500 ಜನ ಭಕ್ತಾದಿಗಳಿಗೆ ಅನ್ನದಾನ ಮಾಡಿ ಶುಭ ಹಾರೈಸಲಾಯಿತು. ಟ್ರಸ್ಟ್ ಅಧ್ಯಕ್ಷ ಲೋಕೇಶ್, ಉಪಾಧ್ಯಕ್ಷರಾದ ರಮೇಶ್ ಹಾಗೂ ಕಾರ್ಯದರ್ಶಿ, ವಕೀಲರಾದ ನಾಗೇಂದ್ರರೆಡ್ಡಿ, ಖಜಾಂಚಿ ರಾಜು ಸ್ವಾಮಿ, ಜಂಟಿ ಕಾರ್ಯದರ್ಶಿ ಸಾಯಿಕುಮಾರ್‌ಮತ್ತು ನಿರ್ದೇಶಕ ಪವನ್, ದಯಾನಂದ್, ನಾಗೇಶ್, ವಂಶಿ, ಗ್ಯಾಸ್ ಬಾಬು, ಜೀವನ್, ತರಕಾರಿ ಮಂಜು, ಸಂದೀಪ್, ಸಿದ್ದೇಶ್, ನಿತಿನ್, ತಿಪ್ಪೇಸ್ವಾಮಿ, ರಾಕೇಶ್, ಮಂಜುನಾಥ್ ಬಾಬು, ರಾಮು, ವೆಂಕಟೇಶ್ ಇತರರು ಹಾಜರಿದ್ದರು.



## ಜಿಲ್ಲಾ ಕಾಂಗ್ರೆಸ್‌ನಿಂದ ಸ್ವಾತಂತ್ರ್ಯೋತ್ಸವ



ತುಮಕೂರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ 80 ನೇ ಸ್ವಾತಂತ್ರ್ಯ ದಿನವನ್ನು ಜಿಲ್ಲಾಧ್ಯಕ್ಷರಾದ ಜಿ.ಚಂದ್ರಶೇಖರಗೌಡ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಕಾಂಗ್ರೆಸ್ ಭವನ ಟ್ರಸ್ಟ್ ಮುಂಭಾಗದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡರು, ಕಾರ್ಯ ಕರ್ತರು ಹಾಗೂ ಸೇವಾದಳದ ಕಾರ್ಯಕರ್ತರೊಂದಿಗೆ ಧ್ವಜಾರೋಹಣ ನೆರವೇರಿಸಿ, ರಾಷ್ಟ್ರಗೀತೆ ಹಾಡಿ,ನಂತರ ರಾಷ್ಟ್ರಪಿತ ಮಹಾತ್ಮಗಾಂಧಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಜವಹರಲಾಲ್ ನೆಹರು, ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು ಮುಖಂಡರಾದ ಇಕ್ಬಾಲ್ ಅಹಮದ್ , ಟೂಡಾ ಮಾಜಿ ಅಧ್ಯಕ್ಷ ಸಿದ್ದಲಿಂಗೇಗೌಡ, ಎಸ್ಸಿ ಸೇಲ್ ಅಧ್ಯಕ್ಷ ನಿಂಗರಾಜು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್.ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಫೈಯಾಜ್ ಅಹಮದ್, ಮಹೇಶ್, ಗ್ರಾಮಾಂತರ ಬ್ಲಾಕ್ನ ಕೆಂಪಣ್ಣ, ಲಕ್ಷ್ಮೀನಾರಾಯಣ, ಪಂಡಿತ ನಾರಾಯಣಪ್ಪ, ಮೆಹಬೂಬ್ ಪಾಷ, ಅಸ್ಲಾಂಪಾಷ, ಶಾಹಾಬುದ್ದೀನ್, ಷಣ್ಮುಖಪ್ಪ,ಇರ್ಫಾನ್ ಅಹಮದ್, ಬೈಲಸ್ವಾಮಿ, ಸುಜಾತ, ಆತೀಕ್ ಅಹಮದ್, ಮಂಗಳ, ವಿಜಯಲಕ್ಷ್ಮಿ,ಸವಿತ, ಕವಿತಾ, ಸೌಭಾಗ್ಯ, ಭಾಗ್ಯಮ್ಮ, ದಾದಾಪೀರ್. ಅದಿಲ್, ಜಿಯಾವುಲ್ಲಾ, ನಯಾಜ್, ಸುರೇಶ್ ,ಕುಮಾರಸ್ವಾಮಿ ,ಕೈದಾಳ ರಮೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು

### ನೌಕರರಿಗೆ, ವಿದ್ಯಾರ್ಥಿಗಳಿಗೆ ಸೀಮಿತವಾದ ರಾಷ್ಟ್ರೀಯ ಹಬ್ಬ। ಬಲಿಷ್ಠ ರಕ್ಷಣಾ ವ್ಯವಸ್ಥೆ, ಸ್ವಾವಲಂಬಿ ರಾಷ್ಟ್ರ ನಮ್ಮದು।

# ವಿಜ್ಞಾನ, ತಂತ್ರಜ್ಞಾನದಲ್ಲಿ ಭಾರತಕ್ಕೆ ಪ್ರಥಮ ಸ್ಥಾನ : ಎಂ.ಟಿ.ಕೃಷ್ಣಪ್ಪ

ತುರುವೇಕೆರೆ : ವಿಜ್ಞಾನ, ತಂತ್ರಜ್ಞಾನದಲ್ಲಿ ವಿಶ್ವಕ್ಕೆ ಪ್ರಥಮ ಸ್ಥಾನದಲ್ಲಿ ಭಾರತ ದೇಶವಿದೆ ಎಂಬುದು ನಾವೆಲ್ಲರೂ ಹೆಮ್ಮೆ ಪಡುವ ವಿಷಯವಾಗಿದೆ ಎಂದು ಶಾಸಕ ಎಂ.ಟಿ.ಕೃಷ್ಣಪ್ಪ ಎಂದರು.

ಪಟ್ಟಣದ ಕೆ.ಹಿರಣ್ಣಯ್ಯ ರಂಗಮಂದಿರ ಆವರಣದಲ್ಲಿ ತಾಲ್ಲೂಕು ಆಡಳಿತ, ತಾಲೂಕು ಪಂಚಾಯ್ತಿ, ಪಟ್ಟಣ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿಶ್ವದ ಯಾವುದೇ ರಾಷ್ಟ್ರಕ್ಕೂ ಕಡಿಮೆ ಇಲ್ಲದಂತೆ ಭಾರತ ಸಾಧನೆಯಲ್ಲಿ ಅತಿ ವೇಗವಾಗಿ ಮುನ್ನುಗ್ಗುತ್ತಿದೆ. 1964ರಲ್ಲಿ ಯುದ್ಧ ನಡೆದಾಗ ನಮ್ಮಲ್ಲಿ ಶಸ್ತ್ರಾಸ್ತ್ರಗಳ ಕೊರತೆಯಿತ್ತು. ಆದರೀಗ ಶಸ್ತ್ರಾಸ್ತ್ರಗಳ ಕೊರತೆಯಿಲ್ಲ. ದೇಶದ ರಕ್ಷಣಾ ವ್ಯವಸ್ಥೆ ಎಷ್ಟು ಬಲಿಷ್ಠವಾಗಿದೆ ಎನ್ನುವುದಕ್ಕೆ ಈ ವರ್ಷ 38600 ಕೋಟಿ ರೂ ಮೌಲ್ಯದ ಶಸ್ತ್ರಾಸ್ತ್ರವನ್ನು ಬೇರೆ ರಾಷ್ಟ್ರಗಳಿಗೆ ರಫ್ತು ಮಾಡಿದ್ದೇವೆ ಎಂಬುದೇ ಸಾಕ್ಷಿಯಾಗಿದೆ. ದೇಶಕ್ಕೆ ಸೆಮಿ ಕಂಡಕ್ಟರ್ ಅನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಪ್ರಸ್ತುತ ದೊಡ್ಡ ಮಟ್ಟದಲ್ಲಿ ಸೆಮಿ ಕಂಡಕ್ಟರ್ ಅನ್ನು ಬೇರೆ ದೇಶಕ್ಕೆ ರಫ್ತು ಮಾಡುತ್ತಿದ್ದೇವೆ. ವಿಜ್ಞಾನ, ತಂತ್ರಜ್ಞಾನದಲ್ಲಿ



ವಿಶ್ವಕ್ಕೆ ಪ್ರಥಮ ಸ್ಥಾನದಲ್ಲಿ ನಾವಿದ್ದೇವೆ ಎಂಬುದು ನಾವೆಲ್ಲರೂ ಹೆಮ್ಮೆ ಪಡುವ ವಿಷಯವಾಗಿದೆ. ದೇಶದ ರಕ್ಷಣಾ ವ್ಯವಸ್ಥೆ, ಮೇಕ್ ಇನ್ ಇಂಡಿಯಾದಲ್ಲೂ ಪ್ರಗತಿಯನ್ನು ಸಾಧಿಸಿ ಸ್ವಾವಲಂಬಿ ದೇಶವಾಗಿ ಬೆಳೆದಿದೆ. ದೇಶವನ್ನಾಳಿದ ಪ್ರಧಾನ ಮಂತ್ರಿಗಳು ದೇಶದ ಅಭಿವೃದ್ಧಿಗೆ ತಮ್ಮದೇ ಆದ ಮಹತ್ತರ ಕೊಡುಗೆಯನ್ನು ನೀಡಿದ್ದು, ಅವರೆಲ್ಲರನ್ನು ನಾವು ಸ್ಮರಿಸಬೇಕಿದೆ ಎಂದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಸೀಲ್ದಾರ್ ಕುಂಞ ಅಹಮದ್, ಗಾಂಧೀಜಿಯವರ ಸತ್ಯಾಗ್ರಹ, ಸುಭಾಷ್ ಚಂದ್ರ ಬೋಸ್ ಅವರ ಸೇನಾ ಹೋರಾಟ, ಭಗತ್ ಸಿಂಗ್, ರಾಜ್ ಗುರು, ಸುಖದೇವ್, ಚಂದ್ರಶೇಖರ ಆಜಾದ್ ಅವರ ಬಲಿದಾನ, ಡಾ.ಅಂಬೇಡ್ಕರ್ ಅವರ ಸಂವಿಧಾನ, ದೇಶದವನ್ನು ಒಗ್ಗೂಡಿಸಲು ಶ್ರಮಿಸಿದ ಸರ್ದಾರ್ ವಲ್ಲಭಾಯಿ ಪಟೇಲ್, ಜವಹರ್ ಲಾಲ್ ನೆಹರು, ಕರ್ನಾಟಕ ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ ಸೇರಿದಂತೆ ಲಕ್ಷಾಂತರ ಮಂದಿಯ ತ್ಯಾಗ ಬಲಿದಾನದ ಫಲವಾಗಿ ಸ್ವಾತಂತ್ರ್ಯ ಸಿಕ್ಕಿದೆ. ದೇಶದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವಾತಂತ್ರವನ್ನು ಒದಗಿಸುವುದೇ ಸ್ವಾತಂತ್ರ್ಯೋತ್ಸವದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ತಾಲ್ಲೂಕು ಆಡಳಿತ ಪಾರದರ್ಶಕವಾಗಿ ಸರ್ಕಾರದ ಸವಲತ್ತುಗಳನ್ನು ಒದಗಿಸಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪತ್ರಕರ್ತ ಗಿರೀಶ್ ಕೆ ಭಟ್, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಾಧಕ ಮಾಚೇನಹಳ್ಳಿ ಚಾರ್ವಿಕ್, ರಂಗಭೂಮಿ ಕಲಾವಿದರಾದ ಗಂಗಾಧರ್, ಬಿ.ಆರ್. ಕೃಷ್ಣಸ್ವಾಮಿ, ಅಗ್ನಿಶಾಮಕ ದಳದ ಧರಣೇಶ್, ಕಂದಾಯ ಇಲಾಖೆಯ ಮಂಜುನಾಥ್, ಸ್ವಯಂಸೇವಕ ಭದ್ರಸ್ವಾಮಿ, ಸಾಹಿತಿ ಪ್ರೇಮ್ ಕುಮಾರ್, ವಿದ್ಯಾರ್ಥಿ ಸುಹಾಸ್, ಹ್ಯಾಂಡ್ ಬಾಲ್ ಚಿನ್ನದ ಪದಕ ವಿಜೇತರಾದ ಉದಯ್ ಕುಮಾರ್, ನಿಶ್ಚಯ್ ಗೌಡ, ಮೋನಿತ್ ಗೌಡ, ಶ್ರೇಯಸ್ ಗೌಡ, ಯೋಗಾನಂದ್, ಉಮಾಶಂಕರ್, ರೈತಸಂಘದ ಕಣಕೂರು ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ವಿವೇಕಾನಂದ ಕಾಲೇಜಿನ ಉಪನ್ಯಾಸಕಿ ಯಶೋಧ ಮುಖ್ಯ ಭಾಷಣ ಮಾಡಿದರು. ಕಸಾಪ ಅಧ್ಯಕ್ಷ ಡಿ.ಪಿ.ರಾಜು, ನೌಕರರ ಸಂಘದ ಅಧ್ಯಕ್ಷ ಪಾಪಣ್ಣ, ಒಕ್ಕಲಿಗರ ಸಂಘದ ಅಧ್ಯಕ್ಷ ತ್ಯಾಗರಾಜ್, ಲಯನ್ಸ್‌ಕ್ಲಬ್ ಅಧ್ಯಕ್ಷ ಸುನಿಲ್ ಬಾಬು, ಇನ್ನರ್ ವೀಲ್ ಅಧ್ಯಕ್ಷೆ ಡಾ.ಆಶಾ ಚೌಧ್ರಿ, ಬಿಇಒ ಸೋಮಶೇಖರ್, ಇಒ ಅನಂತರಾಜು, ಮುಖ್ಯಾಧಿಕಾರಿ ಶ್ರೀನಾಥ್ ಬಾಬು ಸೇರಿದಂತೆ ತಾಲ್ಲೂಕಿನ ವಿವಿಧ ಇಲಾಖೆಗಳ ಮುಖ್ಯಸ್ಥರು, ಅಧಿಕಾರಿಗಳು ಉಪಸ್ಥಿತರಿದ್ದರು.

# ಒಗ್ಗಟ್ಟಾಗಿ ಮುನ್ನಡೆದಾಗ ಭಾರತ ವಿಶ್ವಗುರು ಆಗಲಿದೆ: ನಂಜಾವಧೂತ ಶ್ರೀ

ಶಿರಾ : ಮಳೆಯ ಅಭಾವ ದಿಂದ ರಾಜ್ಯದಲ್ಲಿ ಬರಗಾಲ ಆವರಿಸಿದ್ದು, ಅನ್ನದಾತ ಸಂಕಷ್ಟದಲ್ಲಿದ್ದಾನೆ, ಅನ್ನದಾತನಿಗೆ ಆತ್ಮವಿಶ್ವಾಸ ಮೂಡಿಸುವ ಅವಶ್ಯಕತೆ ಇದ್ದು ಸರ್ಕಾರ ರೈತ ಪರ ಯೋಜನೆಗಳನ್ನು ರೂಪಿಸಿ, ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಮುನ್ನೆಚ್ಚರಿಕೆವಹಿಸಿ ಕಾರ್ಯ ನಿರ್ವಹಿಸಬೇಕು. ಅನ್ನದಾತ ಈ ದೇಶದ ಬೆನ್ನೆಲುಬಾದರೆ, ಯುವ ಸಮೂಹ ಈ ದೇಶದ ಶಕ್ತಿ . ದೇಶ ನಮ್ಮದು ನಾವೆಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಒಗ್ಗಟ್ಟಾಗಿ ಮುನ್ನಡೆದಾಗ ಭಾರತ ವಿಶ್ವಗುರು



ಆಗಲಿದೆ ಎಂದು ಸ್ಪಟಿಕಪುರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಂಜಾವಧೂತ ಸ್ವಾಮೀಜಿ ಹೇಳಿದರು.

ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿ, ಕರ್ನಾಟಕ ಪಬ್ಲಿಕ್ ಸ್ಕೂಲ್ (ಶ್ರೀ ನಂಜಾವದೂತ ಸ್ವಾಮಿ ರೂರಲ್ ಹೈಸ್ಕೂಲ್) ವೈದಾನದಲ್ಲಿ ಶನಿವಾರ ನಡೆದ 80.ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು.

ನಮ್ಮ ಭಾರತ ದೇಶದ ಮುಂದೆ ಸಾಕಷ್ಟು ಸವಾಲುಗಳಿವೆ, ಇತ್ತೀಚೀನ ದಿನಗಳ ಹಿಂದೆ ನಡೆದಂತಹ ಯುದ್ಧಗಳು, ಪ್ರಸ್ತುತ ಈಗ ನಡೆಯುತ್ತಿರುವ ದುಬಾರಿ ಟ್ಯಾಕ್ಸ್ ಟ್ಯಾರೀಫ್ ಯುದ್ಧ, ಇದಕ್ಕೆಲ್ಲಾ ಭಾರತೀಯರಾದ ನಾವುಗಳು ಜಗ್ಗದೆ ಕುಗ್ಗದೆ ದೇಶಕ್ಕೆ ಬೆನ್ನೆಲುಬಾಗಿ ನಿಲ್ಲಬೇಕು ಎಂದರು.

80ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ಪ್ರಾಂಶುಪಾಲ ವಸಂತಕುಮಾರ್ ನೆರವೇರಿಸಿದರು. ಉಪ ಪ್ರಾಂಶುಪಾಲ ವಿ .ಗಂಗಾಧರ್, ಶ್ರೀ ನಂಜಾವಧೂತ ಸ್ವಾಮೀಜಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೊಸಮನೆ ರಂಗನಾಥ್, ವಿ. ಶಿವಾನಂದ,ರಾಜಣ್ಣ, ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ನಾದೂರು ಕೆಂಚಪ್ಪ, ಶ್ರೀಮಠದ ಪಿ ಆರ್ ಓ ತಮ್ಮಣ್ಣ, ಮುಖಂಡರಾದ ಆರ್.ಕೆ.ಮಾರುತಿ, ಚಂದ್ರಶೇಖರ್, ಉಪನ್ಯಾಸಕ ರಂಗಪ್ಪ, ಶಿಕ್ಷಕ ರಾಮಣ್ಣ, ದಿವ್ಯಶ್ರೀ, ಶಂಕರಪ್ಪ, ಮೊದಲಾದವರು ಉಪಸ್ಥಿತರಿದ್ದರು.

# ತ್ಯಾಗ ಬಲಿದಾನಗಳ ಪ್ರತೀಕವೇ ಸ್ವಾತಂತ್ರ್ಯ ದಿನಾಚರಣೆ



ತುಮಕೂರು: ಸ್ವಾತಂತ್ರ್ಯ ದಿನಾಚರಣೆ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ತ್ಯಾಗ, ಬಲಿದಾನ ಮತ್ತು ಹೋರಾಟವನ್ನು ಸ್ಮರಿಸುವ ಪವಿತ್ರ ದಿನವಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಲಕ್ಷ್ಮೀ ನಾರಾಯಣ ಸ್ವಾಮಿ ರವರು ಹೇಳಿದರು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಹೋರಾಟಗಾರರು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅವರ ತ್ಯಾಗ ಮತ್ತು ಬಲಿದಾನದ ಫಲವಾಗಿ ಇಂದು ನಾವು ಸ್ವತಂತ್ರವಾಗಿ ಬದುಕುವ ಅವಕಾಶ ಪಡೆದಿದ್ದೇವೆ. ಆದ್ದರಿಂದ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ಪ್ರತಿಯೊಬ್ಬರೂ ಅರಿತು ಕೊಳ್ಳಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯವು ಕೇವಲ ಹಕ್ಕುಗಳನ್ನು ಅನುಭವಿಸುವುದಕ್ಕೆ ಮಾತ್ರ ಸೀಮಿತವಾಗದೆ, ದೇಶದ ಅಭಿವೃದ್ಧಿ ಮತ್ತು ಪ್ರಗತಿಗೆ ಪ್ರತಿಯೊಬ್ಬ ನಾಗರಿಕನೂ ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವ ಸಂಕಲ್ಪ ಮಾಡಬೇಕಾದ ದಿನವಾಗಿದೆ. ಸಂವಿಧಾನದ ಆಶಯಗಳನ್ನು ಗೌರವಿಸಿ, ರಾಷ್ಟ್ರೀಯ ಏಕತೆ, ಸೌಹಾರ್ದತೆ ಹಾಗೂ ಸಹಬಾಳ್ವೆಯನ್ನು ಕಾಪಾಡುವ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಯುವಜನತೆ ಸ್ವಾತಂತ್ರ್ಯ ಹೋರಾಟ ಗಾರರ ಆದರ್ಶಗಳನ್ನು ಮೈಗೂಡಿಸಿಕೊಂಡು ಶಿಕ್ಷಣ, ಶಿಸ್ತು, ಸೇವಾ ಮನೋಭಾವ ಮತ್ತು ದೇಶಪ್ರೇಮದೊಂದಿಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಲೋಕೇಶ್ ಕುಮಾರ್. ಬಿ, ಸಹಾಯಕ ನಿರ್ದೇಶಕರು (ಗ್ರಾ ಉ), ಮಂಜುನಾಥ್ ಎಸ್ ಎಸ್, ಸಹಾಯಕ ನಿರ್ದೇಶಕರು(ಅ ದಾ) ಗಂಗಾಧರ.ಪಿ ಹಾಗೂ ತಾಲ್ಲೂಕು ಪಂಚಾಯಿತಿ ಸಿಬ್ಬಂದಿ, ವಿಬಿ ಜಿ ರಾಮ್ ಜಿ ತಾಂತ್ರಿಕ ಸಿಬ್ಬಂದಿ, ಎನ್ ಆರ್ ಎಲ್ ಎಂ ಸಿಬ್ಬಂದಿ ಭಾಗವಹಿಸಿ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ನಮನ ಸಲ್ಲಿಸಿದರು.

# ಸದೃಢ ಭಾರತ ನಿರ್ಮಾಣಕ್ಕೆ ಯುವಕರು ಕೌಶಲ್ಯಯುತರಾಗಬೇಕು: ಶಾಸಕ ಎಚ್.ವಿ. ವೆಂಕಟೇಶ್

ಪಾವಗಡ: ದೇಶ ಮತ್ತಷ್ಟು ಪ್ರಗತಿ ಸಾಧಿಸಿ ಸದೃಢ ಭಾರತ ನಿರ್ಮಾಣವಾಗಬೇಕಾದರೆ ಯುವ ಸಮೂಹ ಕೌಶಲ್ಯಯುತವಾಗಬೇಕು ಎಂದು ಪಾವಗಡ ಶಾಸಕ ಎಚ್.ವಿ. ವೆಂಕಟೇಶ್ ಹೇಳಿದರು.



ಪಟ್ಟಣದ ಸರ್ಕಾರಿ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ 80ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪಾವಗಡ ತಾಲೂಕು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದು, ಮುಂದಿನ ದಿನಗಳಲ್ಲೂ ಹಲವು ಮಹತ್ವದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಲಾಗುತ್ತಿದ್ದು, ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಅಗತ್ಯ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ಶೀಘ್ರದಲ್ಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಪಾವಗಡಕ್ಕೆ ಆಹ್ವಾನಿಸಿ ಯೋಜನೆಗೆ ಚಾಲನೆ ನೀಡಲಾಗುವುದು ಎಂದರು. ಜೊತೆಗೆ ಪಾವಗಡ ಪಟ್ಟಣದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಈಗಾಗಲೇ ಸುಮಾರು ?20 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಈ ವೇಳೆ ತಹಸೀಲ್ದಾರ್ ವೈ. ರವಿ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯೋತ್ಸವದ ಸಂದೇಶ ನೀಡಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸುಮಾರು 1,500 ಶಾಲಾ ಮಕ್ಕಳು ಹಾಗೂ ಪೋಷಕರಿಗೆ ಶಾಸಕ ಎಚ್.ವಿ. ವೆಂಕಟೇಶ್ ವೈಯಕ್ತಿಕವಾಗಿ ಉಪಹಾರದ ವ್ಯವಸ್ಥೆ ಮಾಡಿಸಿದ್ದರು. ತುಮುಲ್ ವತಿಯಿಂದ ಮಜ್ಜಿಗೆ ಹಾಗೂ ಸಿಹಿ ವಿತರಿಸಲಾಯಿತು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ನೃತ್ಯ ಪ್ರದರ್ಶನ ನೀಡಿದ ವಿದ್ಯಾರ್ಥಿಗಳ ತಂಡಗಳಿಗೆ ತಲಾ ?10 ಸಾವಿರ ಪ್ರೋತ್ಸಾಹಧನ ವಿತರಿಸಿದ ಶಾಸಕರು, ಮುಂದಿನ ವರ್ಷದಿಂದ ಮೊದಲ ಮೂರು ಅತ್ಯುತ್ತಮ ತಂಡಗಳಿಗೆ ಇನ್ನಷ್ಟು ಹೆಚ್ಚಿನ ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮಧುಸೂದನ್, ಸರ್ಕಲ್ ಇನ್ಸ್‌ಪೆಕ್ಟರ್ ಟಿ. ಸುರೇಶ್, ಬಿಇಒ ರೇಣುಕಮ್ಮ, ಗ್ರೇಡ್–2 ತಹಸೀಲ್ದಾರ್ ಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುದೇಶ್ ಬಾಬು, ಎನ್. ರವಿ, ಶಂಕರ್ ರೆಡ್ಡಿ, ಆರ್.ಎಚ್. ಹನುಮಂತರಾಯಪ್ಪ, ರೈತ ಸಂಘದ ಅಧ್ಯಕ್ಷ ನರಸಿಂಹ ರೆಡ್ಡಿ, ಪೂಜಾರಪ್ಪ, ಕೋಟಗುಡ್ಡ ಸುರೇಶ್, ಚಿಂತಲರೆಡ್ಡಿ, ಷಾ ಬಾಬು, ರಿಜ್ವನ್ ಉಲ್ಲಾ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಮುಸ್ಲಿಂ ಮಹಿಳೆಯರು ಶಿಕ್ಷಣ ಪಡೆದು ಸ್ವಾವಲಂಬಿಗಳಾಗಬೇಕು: ಜಮೀಲಾ ಬೀ

ಅಕ್ಕಿರಾಂಪುರ: ಮಹಿಳೆಯರು ಮೂಢನಂಬಿಕೆಗಳು ಹಾಗೂ ಅನಗತ್ಯ ಸಾಮಾಜಿಕ ಕಟ್ಟುಪಾಡುಗಳಿಂದ ಹೊರಬಂದು ಶಿಕ್ಷಣ ಪಡೆದು ಸ್ವಾವಲಂಬಿಗಳಾಗಬೇಕು. ಪುರುಷರಷ್ಟೇ ಆತ್ಮವಿಶ್ವಾಸದಿಂದ ದುಡಿದು ಕುಟುಂಬದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಉರ್ದು ಶಾಲೆಯ ಮುಖ್ಯೋಪಾಧ್ಯಾಯರಾದ ಜಮೀಲಾ ಬೀ ಹೇಳಿದರು.




ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಅಕ್ಕಿರಾಂಪುರದಲ್ಲಿ ಅಭಿನವ ರಂಗ ಸಂಪನ್ಮೂಲ ಕೇಂದ್ರ (ರಿ.), ತುಮಕೂರು ವತಿಯಿಂದ ಆಯೋಜಿಸಿದ್ದ "ಕರುನಾಡಿನಲ್ಲಿ ಹೆಂಗೆಳಯರ ಬಾಂಧವ್ಯ" (ಹಾಡು, ಆಟ, ಹರಟೆ) ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮಕ್ಕೆ ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಲಾಯಿತು. ಬಳಿಕ ಮಾತನಾಡಿದ ಜಮೀಲಾ ಬೀ, ಮಹಿಳೆಯರು ಮೂಢನಂಬಿಕೆಗಳಿಂದ ಹೊರಬಂದು ತಮ್ಮ ಬದುಕಿನ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವಷ್ಟು ಶಿಕ್ಷಣ, ಆತ್ಮಸ್ಥೈರ್ಯ ಮತ್ತು ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಬೇಕು. ಮಹಿಳೆಯರು ಪುರುಷರಷ್ಟೇ ದುಡಿದು ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ಸಾಮರ್ಥ್ಯ ಹೊಂದಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರಾದ ಬೈರಪ್ಪ, ಮಹಿಳಾ ಶಿಕ್ಷಣದ ಹೋರಾಟಗಾರ್ತಿ ಸಾವಿತ್ರಿಬಾಯಿ ಫುಲೆ ಅವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸಿದರು.

ಮಹಿಳೆಯರಿಗೆ ಶಿಕ್ಷಣ ನೀಡುವುದನ್ನೇ ಸಮಾಜ ವಿರೋಧಿಸುತ್ತಿದ್ದ ಕಾಲದಲ್ಲಿ ಸಾವಿತ್ರಿಬಾಯಿ ಫುಲೆ ಅವರು ಹಲವು ಸಾಮಾಜಿಕ ವಿರೋಧಗಳನ್ನು ಎದುರಿಸಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಮಹತ್ವದ ಕಾರ್ಯವನ್ನು ಕೈಗೊಂಡರು. ಮಹಿಳೆಯರು ಶಿಕ್ಷಣ ಪಡೆದು ಸ್ವಾಭಿಮಾನದಿಂದ ಬದುಕಬೇಕು ಎಂಬ ವಿಚಾರಕ್ಕೆ ಅವರು ಬಲವಾದ ಅಡಿಪಾಯ ಹಾಕಿದರು. ಅವರ ಜೀವನ ಇಂದಿನ ಮಹಿಳೆಯರಿಗೆ ಸ್ಫೂರ್ತಿದಾಯಕವಾಗಿದೆ ಎಂದು ಬೈರಪ್ಪ ಹೇಳಿದರು.

ಉರ್ದು ಶಾಲೆಯ ಶಿಕ್ಷಕಿ ಹೀನಾ ಮಾತನಾಡಿ, ಮುಸ್ಲಿಂ ಮಹಿಳೆಯರು ಶಿಕ್ಷಣ ಪಡೆದು ಸ್ವಾವಲಂಬಿಗಳಾಗಿ ತಮ್ಮ ಮುಂದಿನ ಜೀವನವನ್ನು ಆತ್ಮವಿಶ್ವಾಸದಿಂದ ಮುನ್ನಡೆಸುವಂತಾಗಬೇಕು ಎಂದು ಆಶಿಸಿದರು.

ಮಹಿಳೆಯರು ತಮ್ಮ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಗುರುತಿಸಿಕೊಂಡು ಕುಟುಂಬದ ಜವಾಬ್ದಾರಿಯ ಜೊತೆಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಬೇಕು. ಶಿಕ್ಷಣ ಮತ್ತು ಸ್ವಾವಲಂಬನೆ ಮಹಿಳೆಯರಿಗೆ ಆತ್ಮವಿಶ್ವಾಸ ಹಾಗೂ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಆಸ್ಮಾ ಖಾನಂ ಮಾತನಾಡಿದರು. ಕಾರ್ಯಕ್ರಮದ ನಂತರ ಕೆಲವು ಮಹಿಳೆಯರು ಅಂತಾಕ್ಷರಿ ಹಾಡುಗಳನ್ನು ಹಾಡಿ ಸಂಭ್ರಮಿಸಿದರು. ಇನ್ನು ಕೆಲವರು ತಮ್ಮ ಜೀವನದ ಅನುಭವಗಳು ಹಾಗೂ ಸಣ್ಣಪುಟ್ಟ ಸ್ಫೂರ್ತಿದಾಯಕ ಕಥೆಗಳನ್ನು ಹಂಚಿಕೊಂಡರು.

# ಶ್ರೀದೇವಿ ಕಾಲೇಜಿನಲ್ಲಿ ಸ್ವಾತಂತ್ರ್ಯೋತ್ಸವ



ತುಮಕೂರು: ನಗರದ ಶಿರಾರಸ್ತೆಯ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 80ನೇ ಸ್ವಾತಂತ್ರೋತ್ಸವ ದಿನಾಚರಣೆಯನ್ನು ಆಗಸ್ಟ್ 15 ರಂದು ಶನಿವಾರ ಬೆಳ್ಳಿಗ್ಗೆ 9 ಗಂಟೆಗೆ ಶ್ರೀದೇವಿ ಸಮೂಹ ಸಂಸ್ಥೆಗಳ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ನೇತ್ರ ತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ನರೇಂದ್ರವಿಶ್ವನಾಥ್, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ. ನಾಗರಾಜ ಸೂರ್ಯದೇವರ, ಶ್ರೀದೇವಿ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ, ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಆರ್.ಕೆ.ಮುನಿಸ್ವಾಮಿ, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಡಾ.ಪ್ರದೀಪ್ ವೆಗಿ, ನಿರೂಪಣೆಯನ್ನು ಪ್ರೊ.ಮೆರ್ಲಿನ್, ಕಾರ್ಯಕ್ರಮದಲ್ಲಿ ಡಾ.ಕೆ.ಎಸ್.ರಾಮಕೃಷ್ಣ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಗಾಂಜಾ ಮಾರಾಟ ಆರೋಪ: ಮೂವರ ವಿರುದ್ಧ ಪ್ರಕರಣ

ಕೊಡಿಗೇನಹಳ್ಳಿ: ಮಾದಕ ವಸ್ತು ಗಾಂಜಾವನ್ನು ಅಕ್ರಮವಾಗಿ ಸಾಗಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರೆಂಬ ಖಚಿತ ಮಾಹಿತಿ ಆಧರಿಸಿ ಕೊಡಿಗೇನಹಳ್ಳಿ ಪೊಲೀಸರು ಕಾರ್ಯಾಚರಣೆ ನಡೆಸಿ ಮೂವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ.



ಹೋಬಳಿಯ ತೆರಿಯೂರು ಗ್ರಾಮದ ಕಡೆ ಆ.14ರಂದು ಸಂಜೆ 7.15ರ ಸುಮಾರಿಗೆ ಕೊಡಿಗೇನಹಳ್ಳಿ ಠಾಣೆಯ ಗುಪ್ತ ಮಾಹಿತಿ ಸಿಬ್ಬಂದಿ ನರಸಿಂಹಮೂರ್ತಿ ಗಸ್ತಿನಲ್ಲಿದ್ದಾಗ, ಕಸಿನಾಯಕನಹಳ್ಳಿ ಗ್ರಾಮದ ಗೇಟ್ ಸಮೀಪದ ಮಧುಗಿರಿ–ಹಿಂದೂಪುರ ರಸ್ತೆಯಲ್ಲಿ ಮೂವರು ವ್ಯಕ್ತಿಗಳು ಗಾಂಜಾವನ್ನು ಹೊಂದಿದ್ದು, ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ದೊರೆತಿತ್ತು ಎನ್ನಲಾಗಿದೆ.

ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಮಾಹಿತಿ ನೈಜವಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಜಿಲಾನ್, ಕಲ್ಯಾಣ್ ಕುಮಾರ್ ಹಾಗೂ ಚರಣ್ ಎಂಬುವವರ ವಿರುದ್ಧ ದಾಳಿ ನಡೆಸಿ, ಗಾಂಜಾ ಮಾರಾಟಕ್ಕೆ ಸಂಬಂಧಿಸಿದಂತೆ ಮುಂದಿನ ಕಾನೂನು ಕ್ರಮ ಕೈಗೊಳ್ಳುವಂತೆ ಠಾಣೆಗೆ ವರದಿ ನೀಡಲಾಗಿದೆ.

ಈ ಕುರಿತು ಕೊಡಿಗೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ದಾಳಿಯಲ್ಲಿ ಡಿವೈಎಸ್ಪಿ ಮಂಜುನಾಥ್, ಸಿಪಿಐ ಹನುಮಂತರಾಯಪ್ಪ ಪಿಎಸೈ ರಾಜೇಶ್ ಭೇಟಿ ನೀಡಿ ಸ್ಥಳ ಮಹಜರು ಮಾಡಿದ್ದು ಮಾದಕ ವಸ್ತುಗಳ ಅಕ್ರಮ ಸಾಗಣೆ ಹಾಗೂ ಮಾರಾಟದ ವಿರುದ್ಧ ಪೊಲೀಸರು ಕ್ರಮ ಮುಂದುವರಿಸಿದ್ದಾರೆ.

# ಸ್ಲಂ ನಿವಾಸಿಗಳ ಕುಂದು ಕೊರತೆ ಸಭೆ ಕರೆಯಲು ಡಿಸಿಎಂಗೆ ಮನವಿ

ತುಮಕೂರು: ಸ್ಲಂ ಜನಾಂದೋಲನ ಕರ್ನಾಟಕ ಮತ್ತು ತುಮಕೂರು ಜಿಲ್ಲಾ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ(ರಿ) ವತಿಯಿಂದ ತುಮಕೂರು ಜಿಲ್ಲೆಯಲ್ಲಿ ಸ್ಲಂ ನಿವಾಸಿಗಳ ಜ್ವಾಲಂತ ಸಮಸ್ಯೆಗಳ ಪರಿಹರಿಸಲು ಜಿಲ್ಲಾ ಮಟ್ಟದ ಸಭೆ ಕರೆಯಬೇಕಂದು ಒತ್ತಾಯಿಸಿ ಮಾನ್ಯ ಉಪಮುಖ್ಯಮಂತ್ರಿಗಳು ಹಾಗು ಕಂದಾಯ ಸಚಿವರಾದ ಡಾ.ಜಿ. ಪರಮೇಶ್ವರ್ ರವರಿಗೆ ತುಮಕೂರು ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಗೆ ಆಗಮಿಸಿದ್ದ



ಸಂದರ್ಭದಲ್ಲಿ ಮನವಿ ಸಲ್ಲಿಸಿ ಸಮಾಲೋಚನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕರಾದ ಎ.ನರಸಿಂಹಮೂರ್ತಿರವರು ಉಪಮುಖ್ಯಮಂತ್ರಿಳಾದ ಪರಮೇಶ್ವರ್ ರವರ ಗಮನ ಸೆಳೆದು ತುಮಕೂರು ಜಿಲ್ಲೆಯಲ್ಲಿ ಸ್ಲಂ ನಿವಾಸಿಗಳ ಸಮಸ್ಯೆಗಳಾದ ಹಕ್ಕುಪತ್ರ, ಭೂಮಿ ಹಸ್ತಾಂತರ ಪ್ರಕ್ರಿಯೆ ವಿಳಂಭ, ಹಾಗೂ ತಡೆಗೋಡೆ ನಿರ್ಮಾಣ, ಹಕ್ಕುಪತ್ರ ನೋಂದಣಿ ವಿಳಂಭ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿದರು.

ಸ್ಲಂ ಸಮಿತಿಯ ಕಾರ್ಯದರ್ಶಿ ಅರುಣ್, ಪದಾಧಿಕಾರಿಗಳಾದ ಶಂಕ್ರಯ್ಯ, ಕೃಷ್ಣಮೂರ್ತಿ, ರಾಮಕೃಷ್ಣಯ್ಯ. ಹನುಮಕ್ಕ, ಮುಬಾರಕ್, ಸಲ್ಮಾ, ಪೂರ್ಣಿಮಾ ಮುಂತಾದವರು ಪಾಲ್ಗೊಂಡಿದ್ದರು.

ಕರ್ನಾಟಕ ನಂ.1
17 ಆಗಸ್ಟ್ 2026
# ಸಾಪ್ತ ಸ್ವರ
ಸಾಹಿತ್ಯ-ಚಿಂತನ-ವಿಚಾರ


## ಈ ವಾರದ ಕವನ



ಶ್ರೀವಿಜಯ
ಹಾಸನ

### ಮನವೆಂಬ ಮರ್ಕಟ



ಹರಿಯಗೊಡದಿರು ಮನವೇ
ಎಲ್ಲೆಂದರಲ್ಲಿ
ಮನವು ಮರ್ಕಟವೆಂಬ
ಮಾತು ನಿಜವಿಲ್ಲಿ.
ಓಡುವುದು ನದಿಯಂತೆ
ಬೀಸುವ ಗಾಳಿಯಂತೆ
ಕತ್ತಿಯ ಅಲುಗಿನಂತೆ
ಸುಳಿಯುವುದು ಕ್ಷಣ ಕ್ಷಣ
ಚಪಲ ಚಿತ್ತವ ಹಿಡಿದು ಕಟ್ಟುವ
ಇಂದ್ರಿಯ ನಿಗ್ರಹ ಶಕ್ತಿ
ಇದ್ದರೆ ನೀನಾಗುವೆ ಮಹಾವ್ಯಕ್ತಿ
ಯತ್ನದಿಂದ ಪ್ರಯತ್ನದಿಂದ
ಸಾಧನೆಯ ಬಲದಿಂದ
ಮನಕೆ ಹಾಕು ಲಗಾಮು
ನಿನಗೆ ತೋರುವ ಹಾದಿಯಲಿ
ಛಲದ ಅಭಿವ್ಯಕ್ತಿಯಲಿ
ಮನವ ಮುನ್ನಡೆಸು
ಮೂಗು ತೂರಿಸದಿರು
ಪರರ ವಿಷಯಾಸಕ್ತಿಗೆ
ಚಿಂತೆಯ ಚಿತೆಯಲಿ
ಬೇಯದಿರು ಬರಿದೆ
ಗಾಳಿಯನು ಗುದ್ದಿ
ಮೈ ನೋಯಿಸುವ ಪರಿ
ದುಡುಕುತನದ ದೂರ ಸರಿ
ಚಿಂತಿಸದಿರು ವ್ಯರ್ಥ ಜಿಜ್ಞಾಸೆಯಲಿ
ಕತ್ತಲಿನ ಗರ್ಭವ ಸೀಳಿ
ಹೊರಬರಲಿ ವಾಸ್ತವತೆಯ ಬೆಳಕು
ಹಣ ಅಂತಸ್ತು ಅಧಿಕಾರ
ಇರಬಹುದು ಬಾಳಿಗೆ ಸಾಕಾರ
ಜೀವನವೆಂದರೆ ನೂರು ಅರ್ಥ
ಅರ್ಥದಿಂದಲೇ ವೇದಾಂತ
ಸಿದ್ಧಾಂತ
ಅರಿತು ನಡೆದರೆ ಸುಖಾಂತ

# ಅಪರಾಧಿಗಳ ಪತ್ತೆಗೂ ಬಂತು ಸತ್ಯ ಬಿತ್ತರಿಸುವ ತಂತ್ರಜ್ಞಾನ



ಚಂದ್ರಶೇಖರ್
ಧೂಲೇಕರ್

*ಪರೀಕ್ಷೆ ನಡೆಸಬೇಕಾದ ವ್ಯಕ್ತಿಯ ಲಿಂಗ, ವಯಸ್ಸು, ಆರೋಗ್ಯ ಸ್ಥಿತಿ ಇತ್ಯಾದಿಗಳನ್ನು ಗಮನಿಸಿ ಆ ಆಧಾರದ ಮೇರೆಗೆ ನಿರ್ದಿಷ್ಟ ಪ್ರಮಾಣವನ್ನು ವ್ಯಕ್ತಿಯ ರಕ್ತದೊಳಗೆ ಸೇರಿಸಲಾಗುತ್ತದೆ. ಕೇಂದ್ರೀಯ ನರವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಈ ರಾಸಾಯನಿಕ ರಕ್ತದ ಒತ್ತಡವನ್ನು ಕಡಿಮೆ ಮಾಡುತ್ತದೆ. ಹೃದಯದ ಗತಿ ನಿಧಾನಗೊಳ್ಳುತ್ತದೆ. ವ್ಯಕ್ತಿ ಅರೆಪ್ರಜ್ಞಾಶೂನ್ಯತೆ ಅಥವಾ ಮಂಪರು ಸ್ಥಿತಿಯನ್ನು ತಲುಪುತ್ತಾನೆ.*

ಇದುವರೆಗೆ ದರೋಡೆ, ಕೊಲೆಗಡುಕತನ, ಅತ್ಯಾಚಾರಗಳನ್ನೆಸಗಿದ ಧೂರ್ತರು ಸುಳ್ಳು ಸಾಕ್ಷಿ ಮತ್ತು ಹಣಬಲಗಳಿಂದ ಸತ್ಯ ಸಂದರೆಂದು ತೀರ್ಮಾನವಾಗಿ ಮತ್ತೆ ರಾಜಾರೋಷವಾಗಿ ತಿರುಗಾಡುತ್ತಿದ್ದರು. ಅಪರಾಧಿ ಎಂದು ತಿಳಿದರೂ ಒಪ್ಪಿಕೊಳ್ಳದ ವ್ಯಕ್ತಿಗಳು ಇಂದು ನೂತನ ತಂತ್ರಜ್ಞಾನದ ಪರಿಣಾಮವಾಗಿ ಅಂತರಂಗದಲ್ಲಿ ಬಚ್ಚಿಟ್ಟ ಸತ್ಯವನ್ನು ಹೇಳುತ್ತ ಹೋಗುತ್ತಾರೆ. ಹೀಗಾಗಿ ಇದು "ಸತ್ಯಮೇವ ಜಯತೆ" ಎಂಬ ವಾಕ್ಯಕ್ಕೆ ಜಯಸಿಕ್ಕಂತಾಗಿದೆ.

ನೂತನ ಡಿ.ಎನ್.ಎ. ತಂತ್ರ : ಕೆಲವು ವರ್ಣ ತಂತ್ರಗಳ ಒಂದು ಶಾರ್ಟ್ಕಟ್ ವಿಧಾನವನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಕೆಲವು ವರ್ಣ ತಂತುಗಳ ಮೇಲೆ ಡಿ.ಎನ್.ಎ.ಯ ಸಣ್ಣಸರಣಿಗಳು ಪದೇಪದೇ ಮರುಕಳಿಸುತ್ತವೆ. ಇದನ್ನು ಗಿ.ಓ.ಖಿ.ಖ. (ಮೆಮೋರಿಯಲ್ ನಂಬರ್ ಆಫ್ ಟ್ಯಾಂಡಮ್ ರೀಪೀಟ್ಸ್) ಎಂದು ಕರೆಯುತ್ತಾರೆ. ಆ.ಓ.೦ ಪಿಂಗರ್ ಪ್ರಿಂಟಿಂಗ್ ಅನ್ನು ವ್ಯಾಪಕವಾಗಿ ತಂದೆ, ತಾಯಿ, ಮಕ್ಕಳ ಸಂಬಂಧನ್ನು ಗುರುತಿಸುವುದಕ್ಕಾಗಿ ಇವಲ್ಲದೇ ಯಾವುದೇ ಅಪರಾಧ ನಡೆದ ಸ್ಥಳದಿಂದ ಸಂಗ್ರಹಿಸಲಾದ ರಕ್ತ ಕೂದಲು, ಚರ್ಮದ ಕೋಶಗಳು ಇತ್ಯಾದಿಗಳ ಆ.ಓ.೦. ಯನ್ನು ಹೋಲಿಸಿಕೊಂಡ ಅಪರಾಧಿಯನ್ನು ಕಂಡು ಹಿಡಿಯಬಹುದು.

ಬುಲೆಟ್ ಫಿಂಗರ್ ಪ್ರಿಂಟಿಂಗ್ : ಬುಲೆಟಿನಿಂದ ಹಾರಿಬಂದ ಗುಂಡು ಮೈಮೇಲೆ ಅನೇಕ ವಿಶಿಷ್ಟ ಗುರುತುಗಳನ್ನು ಮೂಡಿಸುತ್ತದೆ. ಈ ಗುರುತುಗಳನ್ನು ತಜ್ಞರು ಗುರುತಿಸುತ್ತಾರೆ. ಪಿಸ್ತೂಲಿನಿಂದ ಎಷ್ಟು ಗಂಡು ಹಾರಿಸಿದರೂ ಅದೇ ಬಗೆಯ ಗುರುತುಗಳು ಮೂಡುತ್ತವೆ. ಅದನ್ನು ಆಧರಿಸಿ ಅಪರಾಧಕ್ಕಾಗಿ ಬಳಸಲಾದ ಪಿಸ್ತೂಲನ್ನು ತಜ್ಞರು ಗುರುತಿಸುತ್ತಾರೆ. ಕೇವಲ 2 ಅಡಿ ದೂರದಿಂದ ಗುಂಡು ಹಾರಿಸಿದ್ದೇ ಆದರೆ ದೇಹದುಲ್ಲುಂಟಾದ ಗಾಯದ ಸುತ್ತನಿರ್ದಿಷ್ಟ ಪ್ರಮಾಣದ ರಾಸಾಯನಿಕಗಳು (ಸೀಸ ಇತ್ಯಾದಿ) ಶೇಖರಗೊಂಡಿರುತ್ತವೆ. ಅದನ್ನು ಆಧರಿಸಿ ಎಷ್ಟು ದೂರದಿಂದ ಗುಂಡನ್ನು ಹಾರಿಸಲಾಯಿತು ಎಂಬುವುದನ್ನು ಕಂಡುಕೊಳ್ಳಲಾಗುತ್ತದೆ.

ಪೆನ್ನೆಲ್ ಪ್ಲೆಥಿಸ್ಮೋಗ್ರಫಿ : ಲೈಗಿಂಕತೆಯ ವಿಷಯದಲ್ಲಿ ವ್ಯಕ್ತಿಯ ಅಸಹಜ ಮತ್ತು ಕ್ರೌರ್ಯಭರಿತ ವರ್ತನೆಯನ್ನು ಗುರುತಿಸಲೆಂದು ಬಳೆಸಲಾಗುವ ಈ ವಿವಾದಾತ್ಮಕ ಪರೀಕ್ಷೆಯನ್ನು ಇನ್ನು ಭಾರತದಲ್ಲಿ ನಡೆಸಲು ಜಾರಿ ಆಗಿಲ್ಲ. ಕೆಲವು ಅಸಹಜ ಲೈಂಗಿಕ ಭಾವನೆಗಳನ್ನುಂಟು ಮಾಡಿದರೆ ವ್ಯಕ್ತಿ ಉದ್ರೇಕಗೊಳ್ಳುತ್ತಾನೆಯೇ? ಅವನ ಮಾನಸಿಕ ಸ್ಥಿತಿ ಹೇಗೆ, ಇಂಥಹ ಪ್ರಚೋದನೆಗಳಿಗೆ



ಅವನು ಶಿಶ್ನ ಯಾವ ರೀತಿ ಪ್ರತಿಕ್ರಿಯಿಸುತ್ತದೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಈ ಪರೀಕ್ಷೆಯನ್ನು ರೂಪಿಸಲಾಗಿದೆ. ನಿರ್ದಿಷ್ಟ ಉತ್ತೇಜನಕ್ಕೆ ಒಳಗಾದ ಶಿಶ್ನದ ಗಾತ್ರ ಮತ್ತು ಸುತ್ತಳತೆಯಲ್ಲಿ ಗುರುತಿಸಲು ಮರ್ಕ್ಯುರಿ ಸ್ಟೇನ್‌ಗೇಜ್ ಇಲ್ಲವೆ ಬ್ಯೂರೋಗೇಜ್ ಎಂಬ ಎರಡರಲ್ಲೊಂದು ಉಪಕರಣಗಳನ್ನು ಶಿಶ್ನಕ್ಕೆ ಅಳವಡಿಸಲಾಗುತ್ತದೆ. ಆ ಬಳಿಕ ಪ್ರಚೋದನಕಾರಿ ಸನ್ನಿವೇಷವನ್ನು ರೂಪಿಸಿ ಅಳತೆಯನ್ನು ಗುರುತಿಸಲಾಗುತ್ತದೆ. ಅತ್ಯಾಚಾರದ ಕೇಸುಗಳ ತನಿಖೆಯಲ್ಲಿ ಹಾಗೂ ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಪೀಡೋಪೈಲ್‌ಗಳನ್ನು ಗುರುತಿಸುವಲ್ಲಿ ಈ ವಿಧಾನ ಸಹಾಯಕವಾಗುತ್ತದೆ.

ಸುಳ್ಳ ಪತ್ತೆಯಂತ್ರ : ಆರೋಪಿಯ ರಕ್ತದ ಒತ್ತಡ, ಉಸಿರಾಟದಲ್ಲಿರುವ ಬದಲಾವಣೆ, ಮಾಂಸ ಖಂಡಗಳ ಚಲನೆ, ಬೆವರು ಹರಿಯುವ ರೀತಿ ಎಲ್ಲವನ್ನು ದಾಖಲು ಮಾಡಿಕೊಳ್ಳುವಯಂತ್ರಕ್ಕೆ ಸುಳ್ಳು ಪತ್ತೆಯಂತ್ರವೆಂದು ಕರೆಯುತ್ತಾರೆ. ಇವೆಲ್ಲವನ್ನು ದಾಖಲಿಸಿಕೊಳ್ಳುವ ಯಂತ್ರಗಳ ಸಂಪರ್ಕವನ್ನು ಆರೋಪಿಯ ದೇಹದೊಂದಿಗೆ ಏರ್ಪಡಿಸಿ ಅನೇಕ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆಯಾ ಪ್ರಶ್ನೆಗೆ ಅವನ ಹಾಗೂ ಅವನ ದೇಹದ ಪ್ರತಿಕ್ರಿಯೆಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಈ ಅಂಕಿ ಅಂಶಗಳನ್ನು ಆಧರಿಸಿ ಆರೋಪಿ ಹೇಳುತ್ತಿರುವ ಸತ್ಯಾಸತ್ಯವನ್ನು ಕಂಡುಕೊಳ್ಳಲಾಗುತ್ತದೆ.

ವಿಡಿಯೋ ಪೊರೆನ್ಸಿಕ್ : ವಿಡಿಯೋ ಟೆಪ್‌ಅನ್ನು ಪರೀಕ್ಷಣೆಗೆ ಒಳಪಡಿಸಿದಾಗ ತಜ್ಞರು ಪ್ರತಿಯೊಂದು ನೆರಳು, ಬೆಳಕು, ಚಲನೆ, ಅವು ಎಷ್ಟೇ ಚಿಕ್ಕದಾಗಿರಲಿ ಎಲ್ಲವನ್ನು ಗಮನಿಸುತ್ತಾರೆ. ಧ್ವನಿಯ, ಬಿಂಬಗಳನ್ನು ಹೋಲಿಸಿ ನೋಡಲಾಗುತ್ತದೆ. ಯಾವ ರೆಕಾರ್ಡ್‌ಗಳಿಂದ ದಾಖಲಿಸಲಾಯಿತೋ ಅದು ಟೇಪಿನ ಮೇಲೆ ಕೆಲವು ಗುರುತುಗಳನ್ನು ಉಳಿಸುತ್ತದೆ. ಅದನ್ನು ಕೂಡ ಪರಿಶೀಲಿಸಲಾಗುತ್ತದೆ.

ಆಡಿಯೋಟೇಪಿನ ಪರೀಕ್ಷೆಯಲ್ಲಿ ಆಟೋಮೆಟಿಕ್ ಸೌಂಡ್‌ವೇವ್ ಅನಲೈಜರ್ ಅಥವಾ ಸೌಂಡ್‌ಸ್ಪೆಕ್ಟ್ರೋಗ್ರಾಫ್‌ನ ಸಹಾಯವನ್ನು ಪಡೆದುಕೊಳ್ಳಲಾಗುತ್ತದೆ. ಅವುಗಳ ಸಹಾಯದಿಂದ ವ್ಯಕ್ತಿಯೊಬ್ಬ ಮಾತನಾಡುವ ವಿಧಾನ ಹಾಗೂ ಕ್ಯಾಸೆಟ್‌ನಲ್ಲಿ ದಾಖಲಾದ ಅವನ ಧ್ವನಿ ಎಲ್ಲವನ್ನು ಸ್ಪಷ್ಟವಾಗಿ ಹೋಲಿಸಿ ನೋಡಲಾಗುತ್ತದೆ.

ಬ್ರೈನ್ ಫಿಂಗರ್ ಪ್ರಿಂಟಂಗ್ : ಆರೋಪಿಯ ತಲೆಗೆ ವಿಶೇಷ ಸೆನ್ಸಾರ್‌ಗಳನ್ನು ಜೋಡಿಸಿ ಅಪರಾಧಕ್ಕೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ತೋರಿಸಿ ಕೆಲವು ಧ್ವನಿಗಳನ್ನು ಕೇಳಿಸಲಾಗುತ್ತದೆ. ಆರೋಪಿಗೆ ಈ ಪ್ರಚೋದನೆಗಳೊಂದಿಗೆ ತೃಣಮಾತ್ರದ ಸಂಬಂಧ ಇದ್ದುದ್ದೆ ಆದರೂ ಆತನ ಮಿದುಳು ವಿಚಿತ್ರ ಅಲೆಗಳನ್ನು ಎಬ್ಬಿಸುತ್ತದೆ. ಈ ಅಲೆಗಳನ್ನು ಕ-300 ಎಂದು ಗುರುತಿಸಲಾಗುತ್ತದೆ. ಈ ಅಲೆಗಳನ್ನು ಸೆನ್ಸರ್‌ಗಳು ಗುರುತಿಸುತ್ತವೆ.

ಅಂದರೆ ಈ ವಿಧಾನ ಸುಳ್ಳುಪತ್ತೆ ಯಂತ್ರದ ಕಾರ್ಯಾಚರಣೆಯನ್ನು ಬಹಳಷ್ಟು ಮಟ್ಟಿಗೆ ಹೇಳುತ್ತದೆ. ಆದರೆ ಆರೋಪಿಗೆ ಇಲ್ಲಿಯಾವುದೇ ಪ್ರಶ್ನೆಗಳನ್ನು ಕೇಳಲಾಗುವುದಿಲ್ಲ. ಇಡೀ ಪರೀಕ್ಷೆ ಎರಡು ಹಂತಗಳಲ್ಲಿ ನಡೆಯುತ್ತದೆ. ಈ ಪರೀಕ್ಷೆ ನಡೆಸುವುದಕ್ಕೆ ಮೊದಲು ಆರೋಪಿಯ ಸಂದರ್ಶನವನ್ನು ಮಾಡಲಾಗುತ್ತದೆ. ನಂತರ ನಿಜವಾದ ಪರೀಕ್ಷೆ ಪ್ರಾರಂಭವಾಗುತ್ತದೆ. ಆಗ ಅಪರಾಧಿಯು ಮೆದುಳ ಒಂದು ಹಂತದಲ್ಲಿ ಒಪ್ಪಿಕೊಳ್ಳುವಂತೆ ಸೂಚಿಸುತ್ತದೆ.

ಮಂಪರು ಪರೀಕ್ಷೆ : (Nareoanalysi): ಇದೊಂದು ಎಂಥ ಚಾಣಾಕ್ಷ ಅಪರಾಧಿಯನ್ನು ಪರೀಕ್ಷಿಸಿ ಆತ ನಿಜವಾದ ಅಪರಾಧಿ, ಎಂದು ಸಾಬೀತು ಪಡಿಸುತ್ತದೆ. ಇಲ್ಲಿ ಸುಳ್ಳು, ತಂತ್ರಗಾರಿಕೆ, ಚಾಣಾಕ್ಷತನಗಳೇನೂ ಅಪರಾಧಿಯಿಂದ ನಡೆಸಲು ಸಾಧ್ಯವೇ ಇಲ್ಲ.

ಸೋಡಿಯಂ ಪೆಂಟೊಥಾರ್ ಅಥವಾ ಸೋಡಿಯಂ ಅಮೈಟಿಲ್‌ಗಳನ್ನು 'ಟ್ರೂಥ್ ಸೀರಮ್', ಎಂದೇ ಕರೆಯಲಾಗುತ್ತದೆ. ಪರಿಣತ ವೈದ್ಯರು ಎರಡರಲ್ಲಿ ಯಾವುದಾದರೊಂದು ರಾಸಾಯನಿಕ ಕಣವನ್ನು ನೀರಿನಲ್ಲಿ ಸೇರಿಸಿ ದ್ರಾವಣವನ್ನು ತಯಾರಿಸುತ್ತಾರೆ. ಪರೀಕ್ಷೆ ನಡೆಸಬೇಕಾದ ವ್ಯಕ್ತಿಯ ಲಿಂಗ, ವಯಸ್ಸು, ಆರೋಗ್ಯ ಸ್ಥಿತಿ ಇತ್ಯಾದಿಗಳನ್ನು ಗಮನಿಸಿ ಆ ಆಧಾರದ ಮೇರೆಗೆ ನಿರ್ದಿಷ್ಟ ಪ್ರಮಾಣವನ್ನು ವ್ಯಕ್ತಿಯ ರಕ್ತದೊಳಗೆ ಸೇರಿಸಲಾಗುತ್ತದೆ. ಕೇಂದ್ರೀಯ ನರವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಈ ರಾಸಾಯನಿಕ ರಕ್ತದ ಒತ್ತಡವನ್ನು ಕಡಿಮೆ ಮಾಡುತ್ತದೆ. ಹೃದಯದ ಗತಿ ನಿಧಾನಗೊಳ್ಳುತ್ತದೆ. ವ್ಯಕ್ತಿ ಅರೆಪ್ರಜ್ಞಾಶೂನ್ಯತೆ ಅಥವಾ ಮಂಪರು ಸ್ಥಿತಿಯನ್ನು ತಲುಪುತ್ತಾನೆ. ಈ ಸ್ಥಿತಿಯಲ್ಲಿ ಆತ ಕಲ್ಪನೆಯನ್ನು ಹರಿಬಿಡಲಾರ. ಕಥೆ ಕಟ್ಟಲಾರ. ಯಾವುದೇ ಪ್ರಶ್ನೆ ಕೇಳಿದರೂ ತನ್ನ ನೆನಪಿನ ಆಳದಿಂದ ಸತ್ಯವನ್ನು ಬಿಟ್ಟು ಇನ್ನೇನೂ ಹೇಳುವುದಿಲ್ಲ. ಈ ಸತ್ಯದ ಔಷಧವನ್ನು ಎರಡನೇ ಮಹಾಯುದ್ಧದ ಸಂದರ್ಭದಲ್ಲಿಯೇ ಅಮೇರಿಕನ್ ಮನೋಶಾಸ್ತ್ರಜ್ಞರು ಬಳಸಿದರ ಬಗೆಗೆ ದಾಖಲೆಗಳಿವೆ. ಸೈನಿಕರು ಯುದ್ಧದ ಸಂದರ್ಭದಲ್ಲಿ ಕಂಡ ಹಾಗೂ ಅನುಭವಿಸಿದ ಭಯಾನಕ ಸನ್ನಿವೇಶಗಳನ್ನು ಯಾರಲ್ಲೂ ಹೇಳದೇ ತಮ್ಮಲೇ ಅದು ಮಿಟ್ಟುಕೊಳ್ಳುತ್ತಿದ್ದರು. ಅದು ಅವರ ಆರೋಗ್ಯದ ಮೇಲೆ ವಿಪರೀತ ಪರಿಣಾಮ ಬೀರುತ್ತಿತ್ತು ಅಂಥಹ ಸೈನಿಕರನ್ನು ಮಂಪರು ಪರೀಕ್ಷೆಗೊಳಪಡಿಸಿ ಸತ್ಯವನ್ನು ಹೊರಗೆಡುವಂತೆ, ಮಾಡಲಾಗುತ್ತಿತ್ತು. ಆಗ ಅವರ ಆರೋಗ್ಯವೂ ಸುಧಾರಿಸುತಿತು.

# ಬಾಲ್ಯ ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಹಾಕುವ ಕಾಲ

– ಉಷಾ ಪಿ ರೈ

ಜೀವನದ ಹಲವಾರು ಘಟ್ಟಗಳಲ್ಲಿ ಬಾಲ್ಯ ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಹಾಕುವ ಕಾಲ. ಆಗ ಮೈಗೂಡಿಸಿಕೊಳ್ಳುವ ಉತ್ತಮ ಗುಣಗಳು ಅವನ ವ್ಯಕ್ತಿತ್ವಕ್ಕೆ ಮೆರುಗು ಕೊಡುವ ಸುಂದರ ಒಡವೆಗಳಾಗುತ್ತವೆ. ಜೀವನವಿಡೀ ಅವನ ಜೊತೆಗಿರುತ್ತವೆ.

ಬೆಳೆಯುವ ಮಕ್ಕಳಿಗೆ ನಿದ್ದೆಯಷ್ಟೇ ಅಗತ್ಯ ಆಟ; ದೈಹಿಕ ಶಕ್ತಿಯನ್ನು ವರ್ಧಿಸುವ ವ್ಯಾಯಾಮ. ಶಾಲಾ ಕಾಲೇಜುಗಳಲ್ಲಿ ಕಲಿಯುವ ವಿದ್ಯೆಯಿಂದ ಜ್ಞಾನಾಭಿವೃದ್ಧಿಯಾಗಬಹುದು. ಹಣ ಸಂಪಾದಿಸುವ ಶಕ್ತಿ ಹೆಚ್ಚಾಗಬಹುದು. ಆದರೆ ಸಫಲ ಜೀವನ ನಡೆಸಬೇಕಾದರೆ, ಪುಸ್ತಕ ವಿದ್ಯೆಗಿಂತಲೂ ಮುಖ್ಯವಾಗಿ ಕೆಲವು ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳುವ ಅಗತ್ಯವಿದೆ. ಈ ಗುಣಗಳನ್ನು ಕಲಿಯಬೇಕಾದರೆ ಜೀವನವೆನ್ನುವ ಪಾಠಶಾಲೆಯಲ್ಲಿ ಪಳಗಬೇಕು.

ಬಾಲ್ಯದಲ್ಲಿ ಮನೆ, ಶಾಲೆ ಬಿಟ್ಟರೆ ಆಟದ ಮೈದಾನಗಳೇ ಮಕ್ಕಳನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸಬಲ್ಲ ಪ್ರಯೋಗ ಶಾಲೆಗಳು. ಅಲ್ಲಿ ಇತರ ಮಕ್ಕಳೊಡನೆ ಕಲೆತು ಆಡುವಾಗ ತಮ್ಮದಾಗಿಸಿಕೊಳ್ಳುವ ಲವಲವಿಕೆ. ಉತ್ಸಾಹ, ಸ್ನೇಹ, ಕ್ರೀಡಾಪಟುಗಳಲ್ಲಿರ ಬೇಕಾದ ತೀಕ್ಷ್ಣದೃಷ್ಟಿ, ಆತ್ಮವಿಶ್ವಾಸ, ಸೋಲುಗೆಲುವುಗಳನ್ನು ಸಮಾನವಾಗಿ ನೋಡುವ ವಿಶಾಲ ಮನೋಭಾವ, ಸ್ಥಿತಪ್ರಜ್ಞತೆ, ಸೋತ ಎದುರಾಳಿಯನ್ನು ಗೌರವದಿಂದ ನೋಡುವ ಹೃದಯ ವಂತಿಕೆ, ಚೈತನ್ಯಶೀಲ ಮನಸ್ಸು ಅವರ ವ್ಯಕ್ತಿತ್ವಕ್ಕೆ ಹೊಸ ಮೆರುಗನ್ನು ಕೊಡುವುದಲ್ಲದೆ ಜೀವನದ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಲು ಸಹಾಯಕ ಗುಣಗಳಾಗುತ್ತವೆ. ವಿವಿಧ ಕ್ರೀಡೆಗಳಲ್ಲಿ ಭಾಗವಹಿಸುವಾಗ ಮಕ್ಕಳು ಈ ಗುಣಗಳನ್ನು ತನ್ನಿಂದ ತಾನೇ ಕಲಿತುಕೊಳ್ಳುತ್ತಾರೆ.



ಇಂದಿನ ಸ್ಪರ್ಧಾಯುಗದಲ್ಲಿ ನೂರಕ್ಕೆ ತೊಂಭತ್ತು ಅಂಕಗಳನ್ನು ತೆಗೆದರೂ ಬೇಕಾದ ಕಾಲೇಜಿನಲ್ಲಿ, ಬೇಕಾದ ವಿಷಯದಲ್ಲಿ ವೃತ್ತಿಶಿಕ್ಷಣಕ್ಕೆ ಸೀಟು ಸಿಗುವುದು ಕಷ್ಟ ಎನ್ನುವ ಹೆದರಿಕೆಯಿಂದ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ತೆಗೆಯುವುದೇ ಮುಖ್ಯವಲ್ಲದೆ ಆಟವಾಡಿ ಪ್ರಯೋಜನವಿಲ್ಲವೆನ್ನುವ ಸಂಕುಚಿತ ದೃಷ್ಟಿಯಲ್ಲಿ ಮಕ್ಕಳನ್ನು ಬೆಳೆಸಿ ಅವರನ್ನು ಪುಸ್ತಕದ ಹುಳುಗಳನ್ನಾಗಿ ಮಾಡಿ ಹೆಚ್ಚಿನ ಅಂಕಗಳನ್ನು ತೆಗೆಯಬಲ್ಲಂತಹ ಯಂತ್ರಗಳನ್ನಾಗಿ ತಯಾರು ಮಾಡುತ್ತಿದ್ದೇವೆ ಎಂದರೂ ಉತ್ಪ್ರೇಕ್ಷೆಯಲ್ಲ. ನರ್ಸರಿ ಯಿಂದಲೇ ತರಗತಿಯಲ್ಲಿ ಪ್ರಥಮನಾಗಿಯೇ ಇರಬೇಕೆನ್ನುವ ಒತ್ತಡ ಹೇರಿ, ಕೈಗೆ ಪುಸ್ತಕ ಕೊಟ್ಟು, ಆಡುವ ಸಮಯದಲ್ಲಿ ಟ್ಯೂಶನ್‌ಗೆ ಹಾಕಿ ಅವರ ಸರ್ವತೋಮುಖ ಬೆಳವಣಿಗೆಯ ಅವಕಾಶಗಳನ್ನೇ ಕಿತ್ತುಕೊಳ್ಳುತ್ತಿದ್ದೇವೆ. ಜೀವನವಿಡೀ ಒಂದಲ್ಲ ಒಂದು ಪೈಪೋಟಿಯನ್ನು ಎದುರಿಸಲೇಬೇಕಾಗಿರುವಾಗ ಬಾಲ್ಯದಲ್ಲಿಯೇ ಮಕ್ಕಳ ಮೇಲೆ ಈ ರೀತಿಯ ಸ್ಪರ್ಧಾ ಒತ್ತಡ ಹೇರಿ ಅವರ ಬಾಲ್ಯದ ಆನಂದವನ್ನು ಯಾಕೆ ಹಾಳು ಮಾಡಬೇಕೆಂಬುದೇ ತಿಳಿಯದಾಗಿದೆ.

ಬಾಲ್ಯ ಒಂದು ಸುಂದರ ಅನುಭವ, ಪುನಃ ಬೇಕೆಂದರೆ ಸಿಗಲಾರದು. ಬಾಲ್ಯದ ಆಹ್ಲಾದಕರ ನೆನಪುಗಳು ನಮ್ಮ ನೆನಪಿನ ಖಜಾನೆಯಲ್ಲಿ ಸೇರಿ ಮುಂದೆ ಮೆಲುಕು ಹಾಕುವಾಗ ಉಲ್ಲಾಸ ಉಕ್ಕಿಸಬಲ್ಲ, ಸ್ಫೂರ್ತಿ ನೀಡಬಲ್ಲ ಒಸಗೆಗಳಾಗಬೇಕಲ್ಲದೆ ಭಾರವಾದ ನೆನಪುಗಳಾಗಬಾರದು. ಇಂದಿನ ಮಕ್ಕಳಿಗೆ ಶಾಲೆ, ಪಾಠ, ಟ್ಯೂಶನ್, ಕಂಪ್ಯೂಟರ್ ಕ್ಲಾಸ್, ಅಬಾಸ್ಕಸ್ ಕ್ಲಾಸ್, ಅದು ಇದೆನ್ನುವ ಗೊಂದಲದಲ್ಲಿ ಬಾಲ್ಯಾವಸ್ಥೆಯ ಸಹಜ ಸುಖಾನುಭವಗಳಿಗೆ ಸಮಯಾಕಾಶವೇ ಇಲ್ಲದಂತಾಗಿದೆ. ಮಕ್ಕಳನ್ನು ಬರೇ ಮಾರ್ಕುಗಳನ್ನು ತೆಗೆಯುವ ಯಂತ್ರಗಳನ್ನಾಗಿ ರೂಪಿಸುವ ನಮ್ಮ ಈ ಮನೋಭಾವ ಸರಿಯೇ? ಇದರಿಂದ ಮಕ್ಕಳು ಏನನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ನಾವು ಯೋಚಿಸಿದ್ದೇವೆಯೇ? ಇಂದಿನ ಮಕ್ಕಳು ಬುದ್ಧಿವಂತರು, ಮೇಧಾವಿಗಳು. ಆದರೆ ಎಷ್ಟು ಮಕ್ಕಳು ಆರೋಗ್ಯವಂತರಾಗಿ ಸದೃಢರಾಗಿದ್ದಾರೆ? 'ಓದಿ ಓದಿ ಮರುಳಾದ ಕೂಚುಭಟ್ಟ' ಎನ್ನುವಂತೆ ಬರೇ ಪುಸ್ತಕದ ಹುಳುಗಳಾದರೆ ಮರುಳಾದ ಅವರು ಅರ್ಧ ಆಯಸ್ಸು ತಲಪುವಾಗಲೇ ಮುಪ್ಪನ್ನಪ್ಪುತ್ತಾರೆ. ಆಟವಾಡದೇ ಬರೇ ಓದಿಕೊಂಡೇ ಬೆಳೆದ ಮಕ್ಕಳ ಮೆದುಳು ಚುರುಕಾದರೂ ದೇಹ ಜಡವಾಗಿರುತ್ತದೆ. ಅವರಿಂದ ಸ್ವಲ್ಪವೂ ದೈಹಿಕ ಶ್ರಮವನ್ನು ಭರಿಸಲಾಗುವುದಿಲ್ಲ. ಮಾನವ ದೇಹವೂ ಒಂದು ಯಂತ್ರದಂತೆ, ಸರಿಯಾಗಿ ಉಪಯೋಗಿಸಿದರೆ ದೀರ್ಘಕಾಲ ಶಕ್ತಿಶಾಲಿಯಾಗಿ ಕೆಲಸ ಮಾಡಬಲ್ಲುದು. ಅಂಗಾಂಗಗಳನ್ನು ಸರಿಯಾಗಿ ಉಪಯೋಗಿಸದೆ ಬಿಟ್ಟರೆ ಕ್ರಮೇಣ ತುಕ್ಕು ಹಿಡಿದು ನಿಷ್ಪ್ರಯೋಜಕವಾಗುತ್ತದೆ. ದೇಹದ ಎಲ್ಲಾ ಅಂಗಾಂಗಗಳಿಗೂ ನಿಯಮಿತ ವ್ಯಾಯಾಮದ ಅಗತ್ಯವಿದೆ. ವ್ಯಾಯಾಮದಿಂದ ದೇಹ ಆರೋಗ್ಯವಂತವಾಗಿರುತ್ತದೆ ಮಾತ್ರವಲ್ಲದೆ ಮನಸ್ಸು ಚೈತನ್ಯಶೀಲವಾಗಿ ಕೆಲಸ ಮಾಡಲು ಶಕ್ತವಾಗುತ್ತದೆ. ಮೇಧಾವಿತನದ ಪ್ರದರ್ಶನದ ಜೊತೆಗೆ ಪರಿಸರ ಪರಿಸ್ಥಿತಿಗಳಿಗೆ ಸಮರ್ಪಕವಾಗಿ ಸ್ಪಂದಿಸುವುದು ಸಾಧ್ಯವಾಗುತ್ತದೆ. ಆರೋಗ್ಯ ಭಾಗ್ಯವಿದ್ದರೆ ಮಾತ್ರ ವಿದ್ಯಾಸಂಪತ್ತನ್ನು ಸಮಂಜಸವಾಗಿ ಉಪಯೋಗಿಸುವುದು ಸಾಧ್ಯ.

ಓದುವುದನ್ನು ಬಿಡಬೇಕೆನ್ನುವ ವಾದ ಇದಲ್ಲ. ಓದಬೇಕು, ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೂ ಬೇಕು. ಜೊತೆಗೆ ಮಕ್ಕಳಿಗೆ ಆಟವೂ ಬೇಕು. ಹೊರೆಹೊರೆ ಪುಸ್ತಕಗಳ ಭಾರ ಹೊತ್ತು ಶಾಲೆಗೆ ಸಾಗುವ ಮಕ್ಕಳ ಬಾಗಿಹೋದ ಬೆನ್ನೆಲುಬನ್ನು, ಸೆಟೆದುಕೊಂಡ ಸ್ನಾಯುಗಳನ್ನು ಸಡಿಲಗೊಳಿಸುವ, ಇಡೀ ದಿನ ಪಾಠ ಕೇಳಿ ಸುಸ್ತಾದ ಮನಸನ್ನು ಹಗುರಗೊಳಿಸುವ ಶಕ್ತಿ ಆಟಕ್ಕಿದೆ. ಮಕ್ಕಳು ತಮ್ಮ ಜೊತೆಯವರೊಡನೆ ಸೇರಿ ಕೇಕೆ ಹಾಕಿ, ಹಾರಿ ಕುಣಿದು ಕುಪ್ಪಳಿಸಿ ಆಡುವಾಗ ಅವರ ದೇಹದ ಪ್ರತೀ ಭಾಗಗಳಿಗೂ ಅಗತ್ಯವಾದ ವ್ಯಾಯಾಮ ದೊರೆತು ಮನಸ್ಸು ಉಲ್ಲಾಸಭರಿತವಾಗುತ್ತದೆ ಎನ್ನುವುದನ್ನು ಮರೆಯಲಾಗದು.

# ಅಪರೂಪದ ಬಾಂಧವ್ಯ

## ಕಿರು ಕಥೆ



– ಪರಿಮಳ
ರಾವ್ ಜಿ ಆರ್

ಹೆತ್ತ ತಾಯಿ ಬಿಟ್ಟುಹೋದ ಎರಡು ಮುಂಗಸಿ ಮರಿಗಳು ಅನಾಥವಾಗಿ ಚೀರಾಡುತ್ತಿದ್ದುದು, ಮನೆಯ ಮಕ್ಕಳ ಕಣ್ಣಿಗೆ ಬಿದ್ದಿತು.

"ಅಪ್ಪಾ ಇಲ್ಲಿ ನೋಡು, ಮುಂಗುಸಿ ಮರಿ ಅಳುತ್ತಾ ಇವೆ. ಅದಕ್ಕೆ ಅಮ್ಮ ಬೇಕಂತೆ" ಎಂದು ಪುಟ್ಟ ಸರಳ ತಂದೆಯ ಹತ್ತಿರ ಹೇಳಿದಳು.

"ಅಮ್ಮಾ! ನೀನು ನೋಡು ಬಾ, ಮುಂಗಸಿ ಮರಿಗಳು ಎಷ್ಟು ಪುಟಾಣಿಗಳಾಗಿವೆ" ಎಂದು ಕೂಗಿ ಕೂಗಿ ಸಿಂಚನ ಕರೆದಳು.

ಮಕ್ಕಳ ಕೂಗಿಗೆ ಓಡಿಬಂದರು ಶರ್ಮಾ ದಂಪತಿಗಳು. ಅವರ ಜೊತೆ ಒಳಗಿದ್ದ ನಾಯಿಯು ಬಂದು ಎಲ್ಲರೂ ಚೀರಾಡುತ್ತಿದ್ದ ಮುಂಗಸಿ ಮರಿಗಳಿಗೇನು ಮಾಡಬೇಕೆಂದು ಯೋಚಿಸುತ್ತಿದ್ದರು.

"ಅಮ್ಮಾ! ನಾನು ಬಿಸ್ಕಟ್ ತಂದು ಕೊಡುವೆ" ಅಂತ ಸರಳ ಒಳಗೆ ಓಡಿದಳು.

"ಅಮ್ಮಾ! ನಾನು ಬ್ರೆಡ್ ಕೊಡ್ಲಾ?" ಅಂತ ಸಿಂಚನ ಕುಣಿದು ಕುಣಿದು ಅಮ್ಮನ ಕೇಳಿದಳು. 10, 8 ವರ್ಷದ ಸರಳ ಸಿಂಚನಾರಿಗೆ ಮುಂಗಸಿ ಮರಿಗಳ ಗೋಳಾಟ ನೋಡಲಾಗಲಿಲ್ಲ.

ಶರ್ಮಾ ದಂಪತಿಗಳಿಗೂ ಕರುಳು ಚುರ್ ಅಂದಿತು. ಅಸಹಾಯಕ ಪುಟ್ಟ ಮರಿಗಳೂ ಅನಾಥವಾಗಿರುವುದು ನೋಡಿ ಹೇಗೆ ಸುಧಾರಿಸಬೇಕೆಂದು ತಿಳಿಯಲಿಲ್ಲ.

ಹುಮನಾಬಾದಿನ ಸಂತಪುರದ ಅವರ ಮನೆಯ ಮುಂದೆ ಒಂದು ಸಣ್ಣ ತೋಟವೂ ಇತ್ತು. ತೋಟದ ಕಾಂಪೌಂಡಿನಲ್ಲಿ ಬಿದ್ದಿದ್ದ ಮರಿಗಳನ್ನು ಮನೆ ಒಳಗೆ ಅಂಗಳಕ್ಕೆ ತಂದರು. ಅದಕ್ಕೆ ಹಾಲು ನೀರು ಬಿಸ್ಕತ್ ಬ್ರೆಡ್ ಎಲ್ಲಾ ಕೊಟ್ಟು ನೋಡಿದರು. ಮುಂಗಸಿಯ ಮಟ್ಟ ಕಂದಮ್ಮಗಳು ಯಾವುದನ್ನೂ ಮುಟ್ಟಲಿಲ್ಲ. ಒಂದೇ ಸಮನೆ ಚೀರಾಡಿ ಅಸಹಕಾಯತೆ ತೋರುತ್ತಿದ್ದವು.

ಶರ್ಮಾ ದಂಪತಿಗಳಿಗಾಗಲಿ ಮಕ್ಕಳ ಆರೈಕೆಯಿಂದಾಗಲಿ ಮುಂಗಸಿ ಮರಿಗಳು ಸುಮ್ಮನಾಗಲಿಲ್ಲ. ಏನು ಮಾಡಲು ತೋಚದೆ ಒದ್ದಾಡುತ್ತಿರುವಾಗ ಅವರ ಮನೆಯ ನಾಯಿ ತಾಯ್ತತನಕ್ಕೆ ಸಿದ್ಧವಾಗಿ ಮುಂದೆ ಬಂದಿತು.

ಎರಡು ಮುಂಗುಸಿ ಮರಿಗಳನ್ನು ಬಹಳ ನಾಜೂಕಾಗಿ ಮೆತ್ತಗೆ ಬಾಯಲ್ಲಿರಿಸಿಕೊಂಡು ಮನೆ ಒಳಗೆ ತಂದಿತು. ಶರ್ಮಾ ದಂಪತಿಗಳಿಗೆ ನಾಯಿರಾಣಿ ಮುಂಗಸಿ ಮರಿಗಳನ್ನು ಹಾನಿ ಮಾಡಿಬಿಡುವುದೋ ಎಂದು ಹೆದರುತ್ತಿದ್ದರು. ಆದರೆ ಅವರು ಕಂಡದ್ದೇ ಬೇರೆ ಪುಟ್ಟ ಮರಿಗಳಿಗೆಂದು ಒಂದು ಕಾರ್ಡು ಬೋರ್ಡ್ ಹಾಸಿ ಅದರ ಮೇಲೆ ಒಂದು ಹಳೆಯ ಬಟ್ಟೆ ಹಾಸಿ ಇಟ್ಟರು. ನಾಯಿ ರಾಣಿ ಮುಂಗಸಿ ಮರಿಗಳನ್ನು ಅದರ ಮೇಲೆ ಇಟ್ಟು ತಾವು ಅವುಗಳಿಗೆ ಹತ್ತಿರವಾಗಿ ಒರಗಿಕೊಂಡಿತು. ಮರಿಗಳಿಗೆ ತಾಯಿ ಸಿಕ್ಕಂತೆ ಅನಿಸಿತು. ರಾಣಿ ನಾಯಿಯ ಸ್ಪರ್ಶಕ್ಕೆ ಭದ್ರತೆ ಕೊಟ್ಟಿತು. ರಾಣಿ ನಾಯಿ ತನ್ನ ನಾಲಿಗೆಯಿಂದ ಮರಿಗಳನ್ನು ನೆಕ್ಕಿ ಸೇವರಿಸುವಾಗ ಶರ್ಮಾ ದಂಪತಿಗಳು ಹೆದರುತ್ತಿದ್ದರು. ನಾಯಿಯಲ್ಲಿ ತಾಯ್ತನದ ಮಮತೆ ಜಾಗೃತವಾಗಿದ್ದು ಅದು ಮುಂಗಸಿ ಮರಿಗಳನ್ನು ಮರಿಗಳಂತೆ ಕಾಣತೊಡಗಿತು. ಅಂದು ರಾತ್ರಿ ಚೀರಾಟವಿಲ್ಲದೆ ಮುಂಗಸಿ ಮರಿಗಳು ರಾಣಿನಾಯಿಯ ಮಡಿಲಲ್ಲಿ ಶಾಂತವಾಗಿ ಮಲಗಿದವು.



ಸರಳ ಸಿಂಚನಾಗೆ ಬೆಳಗಾಗುತ್ತಲೇ ನಾಯಿ ಮುಂಗಸಿ ಮರಿಗಳನ್ನು ಮಲಗಿಸಿಕೊಂಡಿರುವುದನ್ನು ನೋಡಿ ಬಲು ಸಂತಸದಿಂದ ಕುಣಿದಾಡಿದರು. ಶರ್ಮಾ ದಂಪತಿಗಳಿಗಾದ ಮತ್ತೊಂದು ಆಶ್ಚರ್ಯವೆಂದರೆ ನಾಯಿ ಇನ್ನು ಮರಿಹಾಕದೇ ಇರುವಾಗ ಮುಂಗುಸಿ ಮರಿಗಳಿಗೆ ಅದು ನೆಮ್ಮದಿಯಿಂದ ಹಾಲುಣಿಸುತಿತ್ತು ಮುಂಗುಸಿ ಮೇಲೆ ರಾಣಿ ನಾಯಿ ತೋರುವ ಪ್ರೀತಿ ವಿಚಿತ್ರ ಅದ್ಭುತ ಅಪರೂಪ ಎನಿಸತೊಡಗಿತು.

ಏತನ್ಮಧ್ಯೆ ಈ ಅಪರೂಪದ ಬಾಂಧವ್ಯದ ಸುದ್ದಿ ಊರಲ್ಲೆಲ್ಲಾ ಹರಡಿತು. ಜನರು ಸಾಲುಗಟ್ಟಿ ಬಂದು "ಇದು ಹ್ಯಾಗೆ ಸಾಧ್ಯ?" ಎಂದು ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುತ್ತಿದ್ದರು.

ಬೀದಿಯಲ್ಲಿ ಅನಾಥರಾಗಿ ಬಿದ್ದ ಮುದುಕರನ್ನಾಗಲಿ, ಮಕ್ಕಳನ್ನಾಗಲಿ ಕಣ್ಣೆತ್ತಿ ನೋಡುವ ಮನುಷ್ಯತ್ವವಿಲ್ಲದೆ ಮಾನವ ಒಂದು ಕಡೆ, ತನ್ನ ಮಗುವಲ್ಲದ ಮುಂಗುಸಿಯನ್ನು ಮಮತೆಯಿಂದ ಹಾಲುಣಿಸಿವ ನಾಯಿ ಮತ್ತೊಂದು ಕಡೆ. ಮನುಷ್ಯತ್ವವನ್ನು ಹೊಂದಿದ ನಾಯಿ ಎಲ್ಲಿ? ಸ್ವಾರ್ಥಿಯಾಗಿ ಮನುಷ್ಯತ್ವ ತೊರೆದ ಮಾನವನೆಲ್ಲಿ? ಎಂದು ನೆರೆದ ಜನರು ಮಾತಾಡಿಕೊಂಡು ರಾಣಿ ನಾಯಿಯನ್ನು ಹೊಗಳಿ ಹಾಡಿದರು.

ಮಾರನೆಯ ದಿನ ಅದು ದೇಶದ ಎಲ್ಲಾ ಪತ್ರಿಕೆಗಳಲ್ಲಿ ಟಿ.ವಿ.ಗಳಲ್ಲಿ ರಾಣಿನಾಯಿ ಮುಂಗುಸಿ ಮರಿಗಳಿಗೆ ಹಾಲುಣಿಸುವ ಚಿತ್ರ ಮತ್ತು ಅದರ ದೈವಿ ಪ್ರೀತಿ ಕರುಣೆಯ ಬಗ್ಗೆ ದೊಡ್ಡ ಸುದ್ದಿಯಾಯಿತು.

ರಾಣನಾಯಿಯ ಕೀರ್ತಿ ತಾಯ್ತನದ ಪ್ರೀತಿಯಿಂದ ಶರ್ಮಾ ದಂಪತಿಗಳು ಅತ್ಯಂತ ಹರ್ಷಿತರಾದರು. ನೀವು ಸಾಕಿದ ನಾಯಿ ನಿಮ್ಮ ಸಾತ್ವಿಕತೆ ಮಮತೆಯನ್ನೇ ಪ್ರತಿಬಿಂಬಿಸಿದೆ ಎಂದು ಎಲ್ಲರೂ ಅವರನ್ನು ಅಭಿನಂದಿಸಿದರು.

